ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2020



॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-20 ಸಂಚಿಕೆ-05 ಪುಟಗಳು-6 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಉಡುಪಿ

# ಶ್ರೀ ಶಾರದಾ ದೇವಿಯ ಪ್ರತಿಷ್ಠಾಪನಾ ದಿನಾಚರಣೆ


ಮೀನ ಸಂಕ್ರಾಂತಿಯ (ತಾ.14.03.2020) ಶನಿವಾರ ಶ್ರೀ ಶಾರದಾ ದೇವಸ್ಥಾನದಲ್ಲಿ ಸಂಭ್ರಮದ ವಾತಾವರಣ. ಶ್ರೀ ಶಾರದಾ ದೇವಿಯ ಪ್ರತಿಷ್ಠಾಪನಾ ದಿನದ ಉತ್ಸವಕ್ಕೆ ಸಮಾಜ ಬಂಧುಗಳು ಆಗಮಿಸಿದ್ದು, ಬ್ರಹ್ಮಶ್ರೀ ಪಾವಂಜೆ ಜಗದೀಶ ಉಪಾಧ್ಯಾಯರ ನೇತೃತ್ವದಲ್ಲಿ ಬ್ರಹ್ಮಶ್ರೀ ಭವಾನಿಶಂಕರ ಉಪಾಧ್ಯಾಯ, ಪಡುಬಿದ್ರೆ ಶ್ರೀ ಶಿವಭಟ್ ಹಾಗೂ ದೇವಳದ ಪುರೋಹಿತರಾದ ಶ್ರೀ ಧರಣೇಶ ಭಟ್ಟರ ಸಹಯೋಗದೊಂದಿಗೆ ಶುದ್ಧಪುಣ್ಯಾಹ, ಮಹಾಗಣಪತಿಗೆ ಹೋಮ ಹವನಾದಿಗಳು, ಶ್ರೀ ರುದ್ರಾಭಿಷೇಕ, ಶ್ರೀ ಚಕ್ರಾರ್ಚನೆಗಳೊಂದಿಗೆ ಶ್ರೀ ಶಾರದಾ ಮಾತೆಯ ಮಹಾಪೂಜೆ ಸಂಪನ್ನಗೊಂಡಿತು. ಸೇವಾಕರ್ತರಾದ ಶ್ರೀ ಜಿ.ಕೆ. ಕೋಲ್ಪೆ ದಂಪತಿಗಳು ಉಪಸ್ಥಿತರಿದ್ದರು. ಭರ್ಜರಿ ಪುಷ್ಪಾಲಂಕಾರ, ವಾದ್ಯವೃಂದ, ಶಾರದಾ ಭಜನಾಮಂಡಳಿಯಿಂದ ಪಾರಾಯಣ, ಸುಶ್ರಾವ್ಯ ಭಜನೆಗಳು ಕಾರ್ಯಕ್ರಮಕ್ಕೆ ಹೆಚ್ಚಿನ ಮೆರಗು ನೀಡಿತ್ತು. ತದನಂತರ ಶ್ರೀ ಜಿ.ಕೆ ಕೋಲ್ಪೆ ದಂಪತಿಗಳ ವೈವಾಹಿಕ ಜೀವನದ ಸುವರ್ಣ ಸಂಭ್ರಮದ ಅಂಗವಾಗಿ ಶ್ರೀ ಶಾರದಾ ಮಂಟಪದಲ್ಲಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ.ಮಂಜುನಾಥ ಹೆಬ್ಬಾರ್, ಕಾರ್ಯದರ್ಶಿ ಶ್ರೀ ಯು. ಅರವಿಂದ ರಾವ್, ಕೋಶಾಧಿಕಾರಿ ಶ್ರೀ ಬಿ. ಜಯರಾಮ ರಾವ್ ವೇದಿಕೆಗೆ ಆಗಮಿಸಿ ಶ್ರೀ ಜಿ.ಕೆ. ಕೋಲ್ಪೆ ದಂಪತಿಗಳನ್ನು ಆಹ್ವಾನಿಸಿದರು. ದಿನಾಂಕ 06.03.2020 ರಂದು ಶೃಂಗೇರಿ ಜಗದ್ಗುರುಗಳವರಿಂದ ಉಡುಪಿ ಜಿಲ್ಲೆಗೆ ಧರ್ಮಾಧಿಕಾರಿಯಾಗಿ ನಿಯೋಜಿಸಲ್ಪಟ್ಟ ಶ್ರೀ ವಾಗೀಶ ಶಾಸ್ತ್ರಿಗಳನ್ನು ಮುಖ್ಯ ಅತಿಥಿಗಳಾಗಿ ವೇದಿಕೆಗೆ ಆಹ್ವಾನಿಸಲಾಯಿತು. ಕುಮಾರಿ ಸುಧೇಷ್ಣಳು ಪ್ರಾರ್ಥನೆಗೈದಳು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ ಹೆಬ್ಬಾರ್‌ರವರು ಸ್ವಾಗತಿಸಿದರು. ಕಾರ್ಯಕ್ರಮ ನಿರ್ವಾಹಕರಾದ ಶ್ರೀ ಮಟ್ಟು ಕೃಷ್ಣಕುಮಾರರವರು ಪ್ರಸ್ತಾವನೆಗೈದು ಜಿ.ಕೆ.ಕೋಲ್ಪೆ ದಂಪತಿಗಳನ್ನು ಪರಿಚಯಿಸಿದರು. ವೇದಮೂರ್ತಿ ವಾಗೀಶ ಶಾಸ್ತ್ರಿಗಳವರನ್ನು ಗೌರವಿಸಲಾಯಿತು. ನಂತರ ಸುವರ್ಣ ಸಂಭ್ರಮಾಚರಣೆಯ ದ್ಯೋತಕವಾಗಿ ಕೋಲ್ಪೆ ದಂಪತಿಗಳು ಹಾರ ವಿನಿಮಯ ಮಾಡಿಕೊಂಡರು. ತದನಂತರ ಶ್ರೀ ಕೋಲ್ಪೆಯವರು ತಾವು ಸಂಕಲ್ಪಿಸಿದ ಧಾರ್ಮಿಕ, ಸಾಮಾಜಿಕ ಸೇವೆಗಳ ಬಗ್ಗೆ ವಿಷದೀಕರಿಸಿದರು. ಮಹಿಳಾ ಭಜನಾ ಮಂಡಳಿಗೆ 'ಹಾರ್ಮೋನಿಯಂ' ಕೊಡುಗೆ, ಆರೂರು ಪುಣ್ಯಕೋಟಿ ಗೋ ಸೇವಾ ಕೇಂದ್ರಕ್ಕೆ ದೇಣಿಗೆಯನ್ನು, ಸ್ವಚ್ಛತಾ ಅಭಿಯಾನದ ಅಂಗವಾಗಿ ಉಡುಪಿ ನಗರಸಭೆಯ 'ಒಳಕಾಡು' ವಾರ್ಡಿನ ಸದಸ್ಯೆಯಾದ ಶ್ರೀಮತಿ ರಜನಿ ಹೆಬ್ಬಾರರ ಮೂಲಕ ದೇಣಿಗೆ ಕೊಡಿಸಲಾಯಿತು. ಇದರೊಂದಿಗೆ ಕಡಬದ ಜಯದುರ್ಗಾ ಪರಮೇಶ್ವರೀ ದೇವಸ್ಥಾನ ನಿರ್ಮಾಣ ಕಾರ್ಯಕ್ಕೆ ದೇವಸ್ಥಾನದ ತಂತ್ರಿಯವರಾದ ಶ್ರೀ ವಾಗೀಶ ಶಾಸ್ತ್ರಿಯವರ ಗಮನಕ್ಕೆ ತಂದು ರೂ.10,000/– ದೇಣಿಗೆ ಕಳುಹಿಸುವ ವ್ಯವಸ್ಥೆ ಮಾಡಲಾಯಿತು. ಶ್ರೀ ಶಾರದಾ ದೇವಸ್ಥಾನದ ವಾರ್ಷಿಕೋತ್ಸವದ ಅಂಗವಾಗಿ, ಅಲಂಕಾರ–ಪೂಜಾದಿ ವಿನಿಯೋಗಗಳು–ಸುವಾಸಿನಿ ಆರಾಧನೆ–ಕಾರ್ಯಕ್ರಮದ ಕೊನೆಗೆ ಸುಮಾರು 200 ಮಂದಿ ಭಕ್ತಾದಿಗಳಿಗೆ ಪ್ರಸಾದ ಭೋಜನದ ವ್ಯವಸ್ಥೆಯನ್ನು ಶ್ರೀ ಕೋಲ್ಪೆ ದಂಪತಿಗಳು ನಡೆಸಿಕೊಟ್ಟರು. ವಿಶಿಷ್ಟ ರೀತಿಯಲ್ಲಿ ವಿವಾಹ ಸುವರ್ಣ ಸಂಭ್ರಮ ಆಚರಿಸಿದ ಶ್ರೀ ಜಿ.ಕೆ. ಕೋಲ್ಪೆಯವರು ಉಡುಪಿಯಲ್ಲಿ ನೆಲೆಸುವ ಮೊದಲು ಕಡಬ ಭಾಗದಲ್ಲಿ ತಮ್ಮನ್ನು ತೊಡಗಿಸಿಕೊಂಡ 4–5 ದೇವಳಗಳ ಜೀರ್ಣೋದ್ಧಾರದ ಕಾರ್ಯಗಳ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿದ ಬಗ್ಗೆ ವೇದಮೂರ್ತಿ ವಾಗೀಶ ಶಾಸ್ತ್ರಿಯವರು ಮಾಹಿತಿ ನೀಡಿ ಮುಕ್ತಕಂಠದಿಂದ ಅಭಿನಂದಿಸಿದರು.

ಧನ್ಯವಾದ ಸಮರ್ಪಣೆಗೆ ಮೊದಲು, ಶ್ರೀ ಕೋಲ್ಪೆಯವರು ಕಾರ್ಯಕ್ರಮ ಸಂಯೋಜಿಸಿದ ರೂವಾರಿಗಳನ್ನು ಮನಸಾರೆ ಹರಸಿ ಕೃತಜ್ಞತೆ ವ್ಯಕ್ತಪಡಿಸಿದರು. ಕಾರ್ಯದರ್ಶಿ ಅರವಿಂದ ಕುಮಾರ್ ಈ ವರ್ಷದ ಶ್ರೀ ಶಾರದಾ ಪ್ರತಿಷ್ಠಾಪನಾ ಮಹೋತ್ಸವದ ಪೂರ್ತಿ ವೆಚ್ಚವನ್ನು ವಹಿಸಿಕೊಂಡ ಶ್ರೀ ಕೋಲ್ಪೆಯವರನ್ನು ಅಭಿನಂದಿಸುತ್ತಾ, ಸ್ಥಾನಿಕ ಬ್ರಾಹ್ಮಣ ಸಂಘದ ಆಡಳಿತ ಮಂಡಳಿಯ ಸರ್ವಸದಸ್ಯರಿಗೆ ಧನ್ಯವಾದ ಅರ್ಪಿಸಿದರು. ಕಾರ್ಯಕ್ರಮ ನಿರ್ವಾಹಕರಾಗಿ ಸಹಕರಿಸಿದ ಮಟ್ಟು ಶ್ರೀ ಕೃಷ್ಣಕುಮಾರರನ್ನು ಶ್ಲಾಘಿಸಲಾಯಿತು. ಪ್ರಾಯೋಜಕತ್ವ ವಹಿಸಿದ ಶ್ರೀ ಜಿ.ಕೆ. ಕೋಲ್ಪೆ ದಂಪತಿಗಳಿಗೆ ಸಂಘದ ಪರವಾಗಿ ಧನ್ಯವಾದಗಳು.

## ಶ್ರೀ ಶಾರದಾ ಮಂಟಪದಲ್ಲಿ ದಾಸೋಹ



ಲಾಕ್‌ಡೌನ್‌ನಿಂದ ಸಂತ್ರಸ್ತರಾದ ನೆಲೆ ಇಲ್ಲದ ಬಡಕಾರ್ಮಿಕರ ನೆರವಿಗೆ ಧಾವಿಸಿದ ಕಡಿಯಾಳಿಯ ಶ್ರೀ ಗಣೇಶೋತ್ಸವ ಸಮಿತಿಯೊಂದಿಗೆ ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘವು ಕೈಜೋಡಿಸಿ ಸಾವಿರಾರು ಬಡ ಕಾರ್ಮಿಕರಿಗೆ ಲಾಕ್‌ಡೌನ್ ಆರಂಭವಾದ ಮರುದಿನದಿಂದ ಆರಂಭಿಸಿ, ಅದು ಸಡಿಲಿಕೆಯಾದ ದಿನದ ತನಕ ಒಟ್ಟು 40 ದಿನ ಪ್ರತಿದಿನವೂ ಊಟ ಒದಗಿಸಲು ನೆಲೆ ಒದಗಿಸಿತು. ಸಂಘವು ಈ ಸಂಕಷ್ಟದ ಸಮಯದಲ್ಲಿ ತನ್ನ ಆಡಳಿತದಲ್ಲಿರುವ ಶ್ರೀ ಶಾರದಾ ಮಂಟಪದಲ್ಲಿ ಅಡುಗೆ ತಯಾರಿಸಿ ವಿವಿಧ ಸ್ಥಳಗಳಿಗೆ ಪ್ಯಾಕ್ ಮಾಡಿ ಕಳಿಸಲು ಬೇಕಾದ ಸ್ಥಳ ವಿದ್ಯುಚ್ಛಕ್ತಿ, ನೀರು ಇತ್ಯಾದಿಗಳನ್ನು ಉಚಿತವಾಗಿ ಒದಗಿಸಿ ತನ್ನ ಸಾಮಾಜಿಕ ಬದ್ಧತೆಯನ್ನು ಮೆರೆದಿದೆ. ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ್ ಹೆಬ್ಬಾರ್ ಸಹಿತರಾಗಿ ಸಂಘದ ಪದಾಧಿಕಾರಿಗಳು ಕಾರ್ಯಕರ್ತರು ಈ ಮಹಾನ್ ಕಾರ್ಯದಲ್ಲಿ ಭಾಗಿಗಳಾದರು.

**ಇದೇ ಸಂದರ್ಭದಲ್ಲಿ ನಮ್ಮ ದೇವಸ್ಥಾನದ ಅರ್ಚಕರು ಹಾಗೂ ನೌಕರರಿಗೆ ಹಾಗೂ ಸಂಕಷ್ಟದಲ್ಲಿದ್ದ ನಮ್ಮ ಸಮಾಜದ ಇಪ್ಪತ್ತು ಕುಟುಂಬಗಳಿಗೆ ಸಂಘದ ವತಿಯಿಂದ ರೇಷನ್ ಒದಗಿಸಲಾಯಿತು ಹಾಗೆಯೇ ತುರ್ತು ಸೇವೆಗಾಗಿ ಸಮಿತಿಯೊಂದನ್ನು ರಚಿಸಲಾಯಿತು. ಉಡುಪಿಯ ಶಾಸಕರಾದ ಶ್ರೀ ರಘುಪತಿ ಭಟ್‌ರವರು ಸಂಘದ ಈ ಕಾರ್ಯವನ್ನು ಶ್ಲಾಘಿಸಿದ್ದಾರೆ.**

## ಸಮಾಜ ಬಾಂಧವರಲ್ಲಿ ನಿವೇದನೆ

**ಬಹಳ ಕಾಲದಿಂದ ನಿರೀಕ್ಷೆಯಲ್ಲಿದ್ದ ಶ್ರೀ ಶಾರದಾ ಮಂಟಪದ ಊಟದ ಹಾಲ್‌ನ ನವೀಕರಣ ಕಾಮಗಾರಿ ಆರಂಭಗೊಂಡಿದೆ. ಸುಮಾರು ಐವತ್ತು ಲಕ್ಷರೂ ವೆಚ್ಚದ ಅಂದಾಜು ಹಾಕಲಾಗಿದ್ದು ಆಧುನಿಕ ಊಟದ ಕೋಣೆ, ಸ್ವಚ್ಛ ಹಾಗೂ ವಿಶಾಲವಾದ ಶೌಚಾಲಯ, ಮಳೆನೀರಿನ ಜಲಮರುಪೂರೀಕರಣ ಇತ್ಯಾದಿಗಳೊಂದಿಗೆ ಸುಸಜ್ಜಿತ ಊಟದ ಭವನ ತಲೆ ಎತ್ತಲಿದೆ. ಈ ಕಾರ್ಯಕ್ಕೆ ಸಮಾಜಬಾಂಧವರ ಸಹಕಾರವನ್ನು ಅಪೇಕ್ಷಿಸುತ್ತಿದ್ದೇವೆ. ರೂ. ಹತ್ತು ಸಾವಿರಕ್ಕಿಂತ ಹೆಚ್ಚು ಧನಸಹಾಯವಿತ್ತವರ ಹೆಸರನ್ನು ಶಾಶ್ವತ ನಾಮಫಲಕದಲ್ಲಿ ಮುದ್ರಿಸಲಾಗುವುದು. ರೂ. ಮೂವತ್ತು ಸಾವಿರ ಧನಸಹಾಯವಿತ್ತವರಿಗೆ ಇಡೀ ಸಭಾಂಗಣವನ್ನು ಇನ್ನು ಹತ್ತು ವರ್ಷಗಳ ಒಳಗೆ, ಲಭ್ಯವಿದ್ದ ದಿನ, ಒಂದು ಕಾರ್ಯಕ್ರಮಕ್ಕೆ ಉಚಿತವಾಗಿ ಬಳಕೆಗೆ ನೀಡಲಾಗುವುದು. ಸಮಾಜಬಾಂಧವರ ತನು ಮನ ಧನದ ಸಹಕಾರವನ್ನು ಅಪೇಕ್ಷಿಸುವ,**

–ಆಡಳಿತ ಮಂಡಳಿ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಉಡುಪಿ.

# ಸಂಪಾದಕೀಯ.....

**– ಡಾ। ವೈ.ಸುದರ್ಶನ್ ರಾವ್**

ಕಳೆದ ತಿಂಗಳು ಅನಿರೀಕ್ಷಿತವಾಗಿ ಭಾರತಕ್ಕೆ ಬಂದೆರಗಿದ ಕೊರೊನಾ ಖಾಯಿಲೆ ಹಾಗೂ ತನ್ನಿಮಿತ್ತ ಘೋಷಿಸಲಾದ ಲಾಕ್‌ಡೌನ್‌ನಿಂದಾಗಿ ನಮಗೆ ಶ್ರೀ ಶಾರದಾ ಪತ್ರಿಕೆಯನ್ನು ಪ್ರಕಟಿಸಲಾಗಲಿಲ್ಲ. ಹಾಗಾಗಿ ಈ ಬಾರಿಯ ಸಂಪಾದಕೀಯವು ಕೊರೊನಾಕ್ಕಾಗಿಯೇ ಮೀಸಲು. ಕೊರೊನಾ ಖಾಯಿಲೆಯು ಇಡೀ ವಿಶ್ವವನ್ನು ಮಣಿಸುತ್ತಿರುವ ರೀತಿಯು ಊಹೆಗೂ ನಿಲುಕದ ವೇಗದಲ್ಲಿದೆ. ಜೊತೆಗೆ ಅದು ನಮ್ಮ ಜೀವನದಲ್ಲಿ ಅನಾಮತ್ತಾಗಿ ತಂದಿಟ್ಟ ಬದಲಾವಣೆಗಳು ಸಹಾ ಸೋಜಿಗಕ್ಕೆಡೆ ಮಾಡಿವೆ. ಮಿತ್ರರೊಬ್ಬರು ವಾಟ್ಸಾಪ್ ಮೆಸೇಜ್‌ನಲ್ಲಿ ಕ್ರಿಸ್ತಪೂರ್ವ ಹಾಗೂ ಕ್ರಿಸ್ತಶಕ ಇದ್ದಂತೆ ಕೊರೊನಾ ಪೂರ್ವ ಹಾಗೂ ಕೊರೊನಾ ನಂತರ ಎಂದು ಗುರುತಿಸುವ ಕ್ರಮ ಬರಬಹುದು ಎಂಬ ವಿಚಾರ ಸರಣಿ ಹರಿಬಿಟ್ಟರು. ಹಾಗೆಯೇ ಇನ್ನೊಬ್ಬರು ನಾವು ಈಗ ಮೂವತ್ತು ವರ್ಷಗಳು ಹಿಂದೆ ಹೋಗಿದ್ದೇವೆ ಎಂದರು. ಅವರಂದುದು ಆರ್ಥಿಕ ಪರಿಸ್ಥಿತಿಯ ಕುರಿತಾಗಿತ್ತು. ಆದರೆ ಅದರೊಂದಿಗೆ ನಾವು ಮೂವತ್ತು ವರ್ಷಗಳ ಹಿಂದೆ ಆಚರಿಸುತ್ತಿದ್ದ ಮಡಿ ಮೈಲಿಗೆಗಳನ್ನೂ ಪುನಃ ಆಚರಿಸುವಂತಾಗಿರುವುದು ವಿಪರ್ಯಾಸ. ಹಾಗೆಯೇ ಪ್ರತಿಯೊಬ್ಬರೂ ತಮ್ಮ ವೃತ್ತಿಯಲ್ಲಾಗಲಿ ಅಥವಾ ಇನ್ನೆಲ್ಲೋ ಆಗಲಿ ಕೊರೊನಾ ಖಾಯಿಲೆ ತಗಲಿಸಿಕೊಳ್ಳುವ ಅಪಾಯವನ್ನು ಯೋಚಿಸಿಕೊಂಡು ಮುಂದೆ ಹೇಗಪ್ಪಾ ಎಂದು ಚರ್ಚಿಸಿಕೊಳ್ಳುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇಂಗ್ಲೆಂಡಿನ ರಾಜನು ಹಸ್ತಲಾಘವದ ಕ್ರಮ ಬಿಟ್ಟು ನಮಸ್ಕಾರ ಎನ್ನುವುದನ್ನು ಅಳವಡಿಸಿಕೊಂಡದನ್ನು ನಾವೀಗಲೇ ಕಂಡಿದ್ದೇವೆ. ನಾವೂ ಕೊರೊನಾ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಆರಂಭಿಸಿ ಎರಡನೇ ತಿಂಗಳನ್ನು ಕಳೆಯುತ್ತಿದ್ದೇವೆ. ಲಾಕ್‌ಡೌನ್ ಮುಗಿದ ನಂತರ ನಾವು ನಮ್ಮ ಹಳೆಯ ಅಭ್ಯಾಸಗಳನ್ನು, ಹಳೆಯ ಚಾಳಿಗಳನ್ನು ಮುಂದುವರಿಸಿಕೊಂಡು ಹೋಗಲು ಸ್ವತಂತ್ರರೇ? ಪ್ರಪಂಚ ಮೊದಲಿನಂತಾಗುತ್ತದೆಯೇ? ಎಂಬ ಅನುಮಾನ ಎಲ್ಲರನ್ನೂ ಕಾಡುತ್ತಿದೆ. ಈ ಅನುಮಾನಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಈ ಲೇಖನದಲ್ಲಿದೆ.

ಕೊರೋನಾ ಖಾಯಿಲೆಯು ವಿದೇಶದಿಂದ ಮುಖ್ಯವಾಗಿ ಚೀನಾ ದೇಶದಿಂದ ನಮ್ಮ ದೇಶಕ್ಕೆ ವಿಮಾನಗಳು ಮತ್ತು ಹಡಗುಗಳಲ್ಲಿ ಬಂದ ಜನರ ಮುಖಾಂತರ ಹಾಗೂ ಇದೇ ಮಾರ್ಗಗಳಲ್ಲಿ ನಾವು ವಿದೇಶಗಳಿಂದ ತರಿಸಿಕೊಂಡ ವಸ್ತುಗಳ ಮುಖಾಂತರ ನಮ್ಮ ದೇಶಕ್ಕೆ ಬಂದಿತು ಎಂಬುದು ಸರ್ವವಿದಿತ. ಚೀನಾದಲ್ಲಿ ಈ ಖಾಯಿಲೆ ಹೇಗೆ ಉಗಮವಾಯಿತು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಕೊರೊನಾ ವಿಶ್ವದಾದ್ಯಂತ ಹಬ್ಬಿಯಾಗಿರುವುದರಿಂದ ಅದನ್ನಿನ್ನು ಚರ್ಚಿಸಿಯೂ ಉಪಯೋಗವಿಲ್ಲ. ಈ ಖಾಯಿಲೆಯಿಂದಾಗಿ ಪ್ರಪಂಚದಾದ್ಯಂತ ವಿಮಾನಗಳು ಹಾರಾಡುವುದು ನಿಂತಿದೆ. ಭಾರತ ಮಾತ್ರವಲ್ಲ ಇಡೀ ವಿಶ್ವವೇ ಸ್ತಬ್ಧವಾಗಿದೆ. ಸದ್ಯಕ್ಕೆ ಕೊರೊನಾ ತಹಬಂದಿಗೆ ಬಂದಿರುವಂತೆ ಕಾಣಲು ಇದೇ ಮುಖ್ಯ ಕಾರಣ. ಆದರೆ ಇದು ಎಷ್ಟು ದಿನ ಮುಂದುವರೆದೀತು? ಈಗಲೇ ಕೊರೋನ ಪರೀಕ್ಷೆಯ ಕಿಟ್‌ಗಳನ್ನೇ ಚೀನಾದಿಂದಲೇ ತರಿಸಬೇಕಾದ ಅನಿವಾರ್ಯತೆಯಲ್ಲಿ ನಾವಿದ್ದೇವೆ. ಅಂದರೆ ಒಂದಲ್ಲ ಒಂದು ದಿನ ನಾವು ಹೊರಜಗತ್ತಿಗೆ ನಮ್ಮ ಬಾಗಿಲನ್ನು ತೆರೆಯಲೇ ಬೇಕಾಗುತ್ತದೆ. ಇದು ಕೇವಲ ನಮ್ಮ ದೇಶದ ಪಾಡಲ್ಲ, ಪ್ರತಿಯೊಂದು ದೇಶವೂ ಒಂದಲ್ಲ ಒಂದು ಕಾರಣಕ್ಕಾಗಿ ಇನ್ನೊಂದು ದೇಶವನ್ನು ಅವಲಂಬಿಸಿದೆ. ಹಾಗಿರುವಾಗ ಜಗತ್ತಿನ ಪ್ರತಿಯೊಂದು ದೇಶಗಳಲ್ಲಿ ಕೊರೊನಾ ನಿರ್ಮೂಲವಾಗುವ ತನಕ ನಮ್ಮ ದೇಶಕ್ಕೆ ಹೊರದೇಶಗಳಿಂದ ಕೊರೊನಾ ಆಮದಾಗುತ್ತಾ ಇರಲಿರುವುದು ಕೇವಲ ಸಾಧ್ಯತೆಯಾಗಿರದೆ ನಿಜವಾಗಿಯೂ ನಡೆಯಲಿರುವುದೇ ಆಗಿದೆ. ಇದು ಸುಳ್ಳಾಗಬೇಕಾದರೆ ಎಲ್ಲಾ ದೇಶಗಳಲ್ಲಿಯೂ ಒಂದೇ ಸಮಯದಲ್ಲಿ ಈ ಖಾಯಿಲೆ ನಿರ್ಮೂಲನವಾಗಬೇಕು ಅದು ಸದ್ಯ ಭವಿಷ್ಯದಲ್ಲಿ ಸಾಧ್ಯವಿಲ್ಲ. ಏಕೆಂದರೆ ಕೆಲವು ದೇಶಗಳು ಈ ಖಾಯಿಲೆಯ ಜೊತೆಗೆ ಹೋರಾಡುವುದಕ್ಕೆ ಮುಂಚೆಯೇ ಶರಣಾಗತವಾಗಿ ಬಿಟ್ಟಿವೆ. (ಯಾವುದೋ ದೇಶದ ಅಧ್ಯಕ್ಷ ಹೇಳಿದನಂತೆ–ನಮ್ಮಲ್ಲಿ ಕೊರೊನಾ ಇಲ್ಲ, ಯಾಕೆಂದರೆ ನಮ್ಮಲ್ಲಿ ಕೊರೊನಾ ಪರೀಕ್ಷೆಯ ಕಿಟ್‌ಗಳೇ ಇಲ್ಲ!) ಹಾಗಾದರೆ ಉಪಾಯವೇನು? ಇದಕ್ಕಿರುವ ಏಕೈಕ ಪರಿಹಾರವೆಂದರೆ ವಿದೇಶದಿಂದ ಬಂದವರನ್ನೆಲ್ಲಾ ನಾಲ್ಕು ವಾರಗಳ ಕಾಲ ಕ್ವಾರಂಟೈನ್ ಮಾಡುವುದು. ಆದರೆ ಈ ಕ್ರಮವನ್ನು ಬಹಳಷ್ಟು ಸಮಯ ಮುಂದುವರಿಸಿಕೊಂಡು ಹೋಗುವುದು ಸಾಧ್ಯವೇ? ಹಾಗಾದರೆ ನಮ್ಮ ದೇಶದೊಳಗೆ ಕೊರೊನಾ ಪೀಡಿತರು ಪ್ರವೇಶಿಸುವ ಸಾಧ್ಯತೆ ನಮ್ಮ ದೇಶದಲ್ಲಿರುವ ವೈರಸ್ ಒಮ್ಮೆ ನಿರ್ಮೂಲನವಾದ ನಂತರವೂ(ಇದು ಆದೀತೆ ಎಂಬುದೂ ಪ್ರಶ್ನಾರ್ಥಕ) ಆಗಬಹುದು ಅಲ್ಲವೆ? ಅರ್ಥಾತ್ ಕೊರೊನಾ ಖಾಯಿಲೆಯ ವಿರುದ್ಧದ ಹೋರಾಟ ಕೇವಲ ಈ ಕೆಲವು ದಿನಗಳಿಗೆ ಮುಗಿಯದು. ನಾವು ಮುಂದೆಯೂ ಜಾಗರೂಕರಾಗಿರಬೇಕಾದ ಅಗತ್ಯವಿದೆ. ಹಾಗೆಂದು ಒಬ್ಬರನ್ನು ಇನ್ನೊಬ್ಬರು ಸಂಶಯದಿಂದ ನೋಡುವುದು ದೂರ ಇಡುವುದು ಎಷ್ಟು ದಿನಗಳು ಮಾಡಲು ಸಾಧ್ಯ? ಹಾಗಾದರೆ ನಾವು ಕೊರೊನಾದಿಂದ ಸದಾ ಕಾಲ ಬಚಾವಾಗುತ್ತಿರಲು ಉಪಾಯವೇನು? ನಮ್ಮ ಜೀವನ ಶೈಲಿಯನ್ನು ಬದಲಾಯಿಸುವುದೇ ಏಕಮಾತ್ರ ಉಪಾಯ.

ಜೀವನ ಶೈಲಿಯ ಬದಲಾವಣೆಗಳನ್ನು ನಮ್ಮ ಮನೆಯೊಳಗಿನ ಬದಲಾವಣೆಗಳು ಹಾಗೂ ಹೊರಗಿನ ಬದಲಾವಣೆಗಳೆಂದು ವಿಂಗಡಿಸಿಕೊಳ್ಳಬಹುದು.

ಮನೆಯೊಳಗೆ ಬರುವ ವ್ಯಕ್ತಿಯು ತನ್ನೊಂದಿಗೆ ಕೊರೊನಾ ವೈರಾಣುವನ್ನು ಹೊತ್ತು ತಂದಿರುವನೆಂದೇ ಭಾವಿಸಬೇಕು. ಮನೆಯೊಳಗೆ ಅವನಷ್ಟೇ ಒಳಬರಬೇಕು, ಕೊರೊನಾ ಬರಬಾರದು ಎಂದಾದರೆ ಅವನು ಹಾಕಿದ ಚಪ್ಪಲಿ, ಬಟ್ಟೆ, ಹೊತ್ತು ತಂದ ಸಾಮಾನುಗಳನ್ನು ಬಾಗಿಲ ಹೊರಗಿಟ್ಟು ಕೈಕಾಲು ತೊಳೆದು ಸಾಧ್ಯವಾದರೆ ಸ್ನಾನವೇ ಮಾಡಿ ಬೇರೆ ಬಟ್ಟೆ ಧರಿಸಿ ಮನೆಯೊಳಗೆ ಒಳಬರಬೇಕು. ಕೀಬಂಚುಗಳು, ಪರ್ಸು, ಮೊಬೈಲು, ಕರವಸ್ತ್ರ, ಬೆಲ್ಟು ಇತ್ಯಾದಿಗಳನ್ನು ಸ್ಯಾನಿಟೈಸರ್ ಬಳಸಿ ಸ್ವಚ್ಛಮಾಡಿದ ನಂತರವೇ ಒಳ ತರಬೇಕು. ಇದು ಪ್ರತಿ ಬಾರಿಯೂ ಪಾಲಿಸಬೇಕಾದ ಕ್ರಮವಾಗುವುದರಿಂದ ನಮ್ಮ ಮನೆಯ ವೆರಾಂಡಾ ಅಥವಾ ಲಾಬಿ (lobby) ಎಂದು ಕರೆಯುವ ಜಾಗದಲ್ಲಿ ಸಣ್ಣ ಕಪಾಟು ಮಾಡಿಟ್ಟು ಅದರಲ್ಲಿ ಧರಿಸಿದ ಬಟ್ಟೆಯನ್ನು ತೊಳೆಯಲು ಹಾಕಲು ಪ್ರತ್ಯೇಕ ಸ್ಥಳ, ಹೊಸಬಟ್ಟೆ ಬೈರಾಸುಗಳಿಗೆ ಪ್ರತ್ಯೇಕ ಜಾಗ ಮಾಡಿಡಬೇಕು. ಹೊಸಮನೆ ಕಟ್ಟಿಸುವವರು ಲಾಬಿಯಲ್ಲೇ ಬಾತ್ ರೂಂ ಒಂದನ್ನು ಕಟ್ಟಿಸುವುದೊಳ್ಳೆಯದು. ನಾವೇನೋ ನಮ್ಮ ಸ್ವಂತ ಮನೆಗೆ ಪ್ರವೇಶಿಸುವುದಾದರೆ ಈ ರೀತಿ ಮಾಡಿ ಒಳಬರಬಹುದು. ಆದರೆ ಬಂದ ನೆಂಟರು ಮಿತ್ರರನ್ನು ಬಟ್ಟೆ ತೆಗೆದಿಟ್ಟು ಸ್ನಾನ ಮಾಡಿ ಬನ್ನಿ ಎನ್ನಲಾಗುತ್ತದೆಯೇ? ಆದುದರಿಂದ ಲಾಬಿಯನ್ನು ಸ್ವಲ್ಪ ದೊಡ್ಡದಾಗಿ ಕಟ್ಟಿಸಿದ್ದರೆ ಆದಷ್ಟು ಮಂದಿಯನ್ನು ಇಲ್ಲಿಂದಲೆ ಮಾತನಾಡಿಸಿ ಕಳಿಸಬಹುದು. ನಾವು ಇತರರ ಮನೆಗೆ ನೆಂಟರಾಗಿ ಹೋಗುವಾಗ ನೆಗಡಿ ಇತ್ಯಾದಿ ಖಾಯಿಲೆಗಳಿದ್ದಲ್ಲಿ ಖಂಡಿತಾ ಹೋಗಕೂಡದು. ಇತರರ ಮನೆಯೊಳಗೆ ಪ್ರವೇಶಿಸುವ ಮೊದಲು ನಾವಾಗಿಯೇ ಕೈಕಾಲು ತೊಳೆದು ಪ್ರವೇಶಿಸುವುದು ಸಭ್ಯತೆಯ ಲಕ್ಷಣವಾಗಬೇಕು. ಅಪಾರ್ಟ್ಮೆಂಟುಗಳಲ್ಲಿ ಇರುವವರ ಮನೆಗೆ ಹೋಗುವುದಾದರೆ ಕಿಸೆಯಲ್ಲಿ ಸಣ್ಣ ಸ್ಯಾನಿಟೈಸರ್ ಬಾಟಲಿ ಇಟ್ಟಿದ್ದು ಕನಿಷ್ಟ ಕೈಯನ್ನಾದರೂ ಶುಚಿಗೊಳಿಸಿ ಪ್ರವೇಶಿಸುವ ಶಿಸ್ತನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಮನೆಯಲ್ಲಿ ಪಾಲಿಸಬೇಕಾದ ಇನ್ನೊಂದು ಶಿಸ್ತೆಂದರೆ ಒಬ್ಬರು ಇನ್ನೊಬ್ಬರ ವಸ್ತುಗಳಾದ ಮೊಬೈಲ್, ಬಟ್ಟೆ, ಪರ್ಸು, ವಾಚು ಇತ್ಯಾದಿಗಳನ್ನು ಮುಟ್ಟದಿರುವುದು.

ಎರಡನೆಯದು ನಮ್ಮ ಆಫೀಸಿನಲ್ಲಿ ತರಬೇಕಾದ ಬದಲಾವಣೆಗಳು. ಜನರ ಸಂಪರ್ಕವಿಲ್ಲದೆ ಕೇವಲ ಫೈಲು ಕಂಪ್ಯೂಟರ್‌ಗಳೊಂದಿಗೆ ಕೆಲಸ ಮಾಡುವವರ ಜೀವನ ಸ್ವಲ್ಪ ಸುಲಭ. ಮಾಸ್ಕ್ ಧಾರಣೆ, ಆವಾಗಾವಾಗ ಕೈ ತೊಳೆಯುವುದು ಅಥವಾ ಸ್ಯಾನಿಟೈಸರ್ ಬಳಸುವುದು, ಅಕಸ್ಮಾತ್ ಯಾರಾದರೂ ಬಳಿ ಬಂದರೆ ಅವರ ಕೈಗೆ ಸ್ವಲ್ಪ ಸ್ಯಾನಿಟೈಸರ್ ಸುರಿದು ವ್ಯವಹರಿಸಿದರೆ ಸಾಕು, ಇವರು ಸೇಫ್. ಆದರೆ ಪ್ರತೀ ದಿನ ನೂರಾರು ಜನರೊಂದಿಗೆ ಸಂಪರ್ಕ ಬರುವ ವೈದ್ಯರು, ಅಂಗಡಿಗಳು, ಸರಕಾರಿ ಆಫೀಸುಗಳು, ಬ್ಯಾಂಕುಗಳು, ಮಾರ್ಕೆಟುಗಳು (ವುಹಾನ್ ಪಟ್ಟಣದ ಮಾಂಸದ ಮಾರುಕಟ್ಟೆಯಲ್ಲೇ ಈ ಖಾಯಿಲೆಯ ಜನನವಾದದ್ದು) ಈವಾಗಲೇ ವಿಶೇಷ ಕಾಳಜಿ ತೆಗೆದುಕೊಳ್ಳದಿದ್ದರೆ ತಾವೂ ಈ ಖಾಯಿಲೆಗೆ ಬಲಿಯಾಗುವುದರೊಂದಿಗೆ ಇವರ ಆಫೀಸುಗಳು/ಮಾರ್ಕೆಟ್ ಅಲ್ಲಿಗೆ ಭೇಟಿಯಿಡುವವರಿಗೆ ಖಾಯಿಲೆ ಅಂಟಿಸುವ ಕೇಂದ್ರಗಳಾಗುತ್ತವೆ. ಆದುದರಿಂದ ಲಾಕ್‌ಡೌನ್ ಮುಗಿದಾಕ್ಷಣ ಆಫೀಸು/ಮಾರ್ಕೆಟು ಮರು ಆರಂಭಿಸುವ ಮುನ್ನವೇ ಕೆಲವು ಬದಲಾವಣೆಗಳನ್ನು ಅಳವಡಿಸಿಕೊಳ್ಳುವ ಅಗತ್ಯ ಇವರಿಗಿದೆ. ತಮ್ಮ ಆಫೀಸಿನಲ್ಲಿ ಜನಸಂದಣಿಯನ್ನು ಕಡಿಮೆಮಾಡುವುದು, ಜನರು ತಮ್ಮ ಆಫೀಸಿನಲ್ಲಿ ಕಾಯುವ ಸಮಯವನ್ನು ಕಡಿಮೆ ಮಾಡುವುದು (ಇದ್ದಷ್ಟು ಸಮಯ ಕೆಮ್ಮುವುದು ಸೀನುವುದು ಅಲ್ಲಲ್ಲಿ ಮುಟ್ಟುವುದು ಮಾಡುವುದರಿಂದ), ಗಿರಾಕಿಗಳ ಮಧ್ಯೆ ಹಾಗೂ ತನ್ನ ಮಧ್ಯೆ ಕನಿಷ್ಟ ಎರಡು ಮೀಟರ್‌ಗಳ ಅಂತರವನ್ನು ಕಾಪಾಡುವುದು ಹಾಗೂ ಜನರು ಮುಟ್ಟಬಹುದಾದ ವಸ್ತುಗಳ ಸಂಖ್ಯೆಯನ್ನು ಕಡಿಮೆ ಮಾಡುವುದು ಈ ತುರ್ತು ಬದಲಾವಣೆಗಳ ಧ್ಯೇಯವಾಗಿರಬೇಕು. ಇದಕ್ಕಾಗಿ ಆದಷ್ಟು ಆನ್‌ಲೈನ್ ವ್ಯವಹಾರ, ಅಪಾಯಿಂಟ್‌ಮೆಂಟ್ ಪ್ರಕಾರ ಕೆಲಸ, ಕೆಲಸದ ಸಮಯದ ವಿಸ್ತರಣೆ ಜೊತೆಗೆ ಪ್ರತಿಯೊಂದು ಹಂತದಲ್ಲಿಯೂ ಸ್ವಚ್ಛತೆಯ ಮನಪೂರ್ವಕ ಪರಿಪಾಲನೆ ಇಷ್ಟನ್ನು ನಾವಿಲ್ಲಿ ಸೂಚಿಸಬಹುದು. ಜೀನಸು ಅಂಗಡಿಯವರು ವಿರಾಮ ಸಮಯದಲ್ಲಿ ಸಾಮಾನುಗಳನ್ನು ತೂಕ ಮಾಡಿ ಪ್ಯಾಕ್ ಮಾಡಿಟ್ಟರೆ ಗಿರಾಕಿಗಳು ಅಂಗಡಿಯಲ್ಲಿ ಕಳೆಯುವ ಸಮಯ ಕಡಿಮೆಯಾಗುತ್ತದೆ. ಗಿರಾಕಿಗಳು ತಮ್ಮ ದಿನಸಿ ಸಾಮಾನಿನ ಪಟ್ಟಿಯನ್ನು ಅಂಗಡಿಕಾರನಿಗೆ ವಾಟ್ಸಾಪ್ ಮುಖಾಂತರ ಮೊದಲೇ ಕಳಿಸಿದಲ್ಲಿ ಅವನು ಅದನ್ನು ಮೊದಲೇ ಪ್ಯಾಕ್ ಮಾಡಿಡಬಹುದು. ಇದೆಲ್ಲದರ ಬದಲು ಆನ್‌ಲೈನ್ ವ್ಯವಹಾರ ಅತ್ಯುತ್ತಮ. ಬ್ಯಾಂಕಿಂಗ್ ವ್ಯವಹಾರ, ಬಿಲ್ಲು ಪಾವತಿ , ವಿಮೆ ಕಂತು ಇತ್ಯಾದಿಗಳನ್ನು ಎಲ್ಲರೂ ಆನ್‌ಲೈನ್ ಮುಖಾಂತರ ಮಾಡುವುದನ್ನು ಕಲಿಯಬೇಕು. ಹಾಗೆಯೇ ವೈದ್ಯರ ಕ್ಲಿನಿಕ್‌ನಲ್ಲಿ ಒಬ್ಬ ರೋಗಿಯೊಂದಿಗೆ ಒಬ್ಬನೇ ಸಂಬಂಧಿಕ ಎಂದು ರೂಲ್ಸ್ ಮಾಡಬಹುದು. ಅಪಾಯಿಂಟ್‌ಮೆಂಟ್ ಪ್ರಕಾರ ಭೇಟಿಯನ್ನು ಕಡ್ಡಾಯ ಮಾಡಬಹುದು. ಬಾಗಿಲಿನ ಹಿಡಿಗಳು, ನಲ್ಲಿಗಳು, ಮೆಟ್ಟಿಲುಗಳ ರೇಯ್ಲಿಂಗ್‌ಗಳು, ಲಿಫ್ಟುಗಳು, ಸ್ವಿಚ್ಚುಗಳು ಕೊರೊನಾ ವಾಹಕಗಳಾದ್ದರಿಂದ ಸೆನ್ಸಾರ್ ಚಾಲಿತ ತನ್ನಿಂತಾನಾಗಿ ತೆರೆಯುವ ಬಾಗಿಲುಗಳು, ನಲ್ಲಿಗಳಿಂದ ಸ್ವಯಂಚಾಲಿತ ಸೋಪು ಹಾಗೂ ನೀರು ಬರುವ ವ್ಯವಸ್ಥೆ, ಡ್ರೈಯರ್‌ಗಳು ಹೀಗೆ ಈಗ ದೊಡ್ಡ ದೊಡ್ಡ ಮಾಲ್‌ಗಳಲ್ಲಿರುವ ಸವಲತ್ತುಗಳು ನಮ್ಮೂರಿನ ಅಂಗಡಿಗಳಿಗೂ ಬರಬೇಕಾಗುತ್ತದೆ. ಲಿಫ್ಟ್ ಬದಲು ಮೆಟ್ಟಿಲುಗಳನ್ನು ಹತ್ತಿ ಹೋಗುವುದನ್ನು ರೂಢಿಸಿಕೊಳ್ಳಬೇಕಾಗುವುದು.

ಮೂರನೆಯದು ನಾವು ಪ್ರಯಾಣ ಮಾಡುವ ರೀತಿಯಲ್ಲಿ ಬದಲಾವಣೆ. ಇಂದಿನಂತೆ ನಲುವತ್ತು ಜನ ಹೋಗುವ ಬಸ್ಸಿನಲ್ಲಿ ಎಂಬತ್ತು ಜನರನ್ನು ತುರುಕಿಸುವ ಕಾಲ ಮುಗಿದು ಇಬ್ಬರು ಕುಳಿತುಕೊಳ್ಳುವ ಸೀಟಿನಲ್ಲಿ ಒಬ್ಬರು ಪ್ರಯಾಣಿಸಬೇಕಾದ ಸಮಯ ಬಂದಿದೆ. ಇಲ್ಲವಾದಲ್ಲಿ ಪ್ರಯಾಣಿಕರಲ್ಲಿ ಒಬ್ಬನಿಗೆ ಕೊರೋನಾ ಇದ್ದಲ್ಲಿ ಕಂಡಕ್ಟರನಿಂದ ಹಿಡಿದು ಬಸ್ಸು ಪೂರ್ತಿ ಜನರಿಗೆ ಕೊರೊನಾ ಅಂಟೀತು. ಬಸ್ಸುಗಳ ಸಂಖ್ಯೆಯನ್ನೂ ಹೆಚ್ಚಿಸಬೇಕಾಗುವುದು. ಜೊತೆಗೆ ಹೆಚ್ಚು ಮಂದಿಗೆ ಉದ್ಯೋಗವೂ ದೊರಕೀತು. ಆದರೆ ಪ್ರಯಾಣದ ದರವೂ ಹೆಚ್ಚುವುದು, ವಾಯುಮಾಲಿನ್ಯ ಹೆಚ್ಚುವುದೂ ಖಂಡಿತಾ. ಕೊರೊನಾ ಭೀತಿಯಿಂದ ಹೆಚ್ಚಿನವರು ಸ್ವಂತ ವಾಹನವನ್ನೇ ಬಳಸಲಿರುವುದರಿಂದ ಟ್ರಾಫಿಕ್ ಜಾಂ ಹದಗೆಡಬಹುದು. ಆದುದರಿಂದ ಪ್ರತಿಯೊಬ್ಬರೂ ನಮ್ಮೆಲ್ಲರ ಪ್ರಯಾಣವೇ ಕಡಿಮೆಯಾಗುವಂತೆ ಯೋಚಿಸಬೇಕು. ಕೆಲಸದ ಜಾಗದ ಬಳಿಯೇ ಮನೆ ಮಾಡಿ, ಮಕ್ಕಳನ್ನು ಅಲ್ಲಿಯೇ ಹತ್ತಿರದ ಶಾಲೆಗೆ ಸೇರಿಸಿ, ಅಲ್ಲಿಯೇ ಹತ್ತಿರದ ಅಂಗಡಿಯಲ್ಲಿ ವ್ಯಾಪಾರ ಮಾಡಿ ನಮ್ಮ ಪ್ರಯಾಣದ ರಿಸ್ಕನ್ನು ಕಡಿಮೆಮಾಡಬಹುದು. ಸ್ವಂತ ವಾಹನದಲ್ಲಿ ಪ್ರಯಾಣಿಸಬಹುದಾದ ಪ್ರವಾಸಿ ತಾಣಗಳಿಗೆ ಮಾತ್ರಾ ಭೇಟಿ ನೀಡಿ ರಜಾ ಕಳೆಯಬಹುದು. ಸರಕಾರವು ದೊಡ್ಡದೊಡ್ಡ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ಕೆಲಸದ ಜಾಗದ ಬಳಿಯೇ ಕ್ವಾರ್ಟರ್ಸ್ ಕಟ್ಟಿಕೊಡಬೇಕೆಂಬ ನಿಯಮ ಮಾಡಬಹುದು. ಅಪಾರ್ಟ್ಮೆಂಟು ಕಟ್ಟುವಾಗ ಅದರಲ್ಲಿ ಒಂದು ಜೀನಸು ಅಂಗಡಿ ಹಾಗೂ ಒಂದು ವೈದ್ಯರ ಕ್ಲಿನಿಕ್ ಇದ್ದರೆ ಹೊರಹೋಗುವ ಕೆಲಸ ಅರ್ಧದಷ್ಟು ಕಡಿಮೆಯಾಗುತ್ತದೆ.

(3ನೇ ಪುಟಕ್ಕೆ...)

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

**ಕವನ**

## "ಹೇಳ ಹೆಸರಿಲ್ಲದಂತೆ ಓಡಿಹೋಗುತ್ತದೆ"

ಎಲ್ಲಿಂದ ಬಂದಿತೋ ಕಣ್ಣಿಗೆ ಕಾಣದ
ಮಹಾಮಾರಿ ಕೊರೊನಾ.
ಮನೆಮಂದಿಗೆಲ್ಲ ಭೀತಿ ತರುತಿದೆ
ಪೆಡಂಭೂತ ಇದೇನಾ?

ಸಮರೋಪಾದಿಯಲಿ ವಿಶ್ವವ್ಯಾಪಿಸಿದೆ
ಸಾಂಕ್ರಮಿಕ ಕೊರೊನಾ.
ಕೊರೊನಾದ ಭಯದಿಂದ ಬಳಲಿ
ನರಳುತಿದೆ ಜನಜೀವನ.

ಕೊರೊನಾದಿಂದ ಪಾರಾಗಲೇಬೇಕು
ಶುಚಿತ್ವವೊಂದೆ ದಾರಿ.
ಅಡ್ಡಾದಿಡ್ಡಿ ಹಾದಿಬೀದಿ ತಿರುಗದೆ
ಜನರೇ ಮನೆಯೊಳಗಿರಿ.

ಬೇಯಿಸಿದ ಆಹಾರ ಬಿಸಿಯನೀರು
ಸೇವನೆ ಮಾಡುವುದ ಮರೆಯದಿರಿ.
ಸೋಪಿನಿಂದ ಕೈಯನು ತೊಳೆಯದೆ
ಬಾಯಿಕಣ್ಣನು ಮುಟ್ಟದಿರಿ.

ಕೊರೊನಾವೇನು? ಮಹಾಮಾರಿಏನು?
ತೆಗೆದುಕೊಂಡರೆ ಮುನ್ನೆಚ್ಚರಿಕೆ.
ಹೇಳ ಹೆಸರಿಲ್ಲದಂತೆ ಓಡಿಹೋಗುತ್ತದೆ
ಇರಲಿ ಜಾಗೃತಿ ತಿಳುವಳಿಕೆ.

**–ಮಾರ್ಪಳ್ಳಿ ಆರ್. ಮಂಜುನಾಥ್**
**9900256083**

## ಗಾಢ ಅಂಧಕಾರದಲ್ಲೂ ಹೊಳೆಯುವ ನಕ್ಷತ್ರಗಳಾಗೋಣ

ಜೀವನದಲ್ಲಿ ಉನ್ನತ ಆದರ್ಶವಿಟ್ಟು ಕೊಂಡವರಿಗೆ ಎದುರಾಗುವ ಸಮಸ್ಯೆಗಳು ಒಂದು ರೀತಿಯ ವರವಿದ್ದಂತೆ. ಅನಿರೀಕ್ಷಿತ ಘಟನೆಗಳು, ಅನಿರೀಕ್ಷಿತ ವ್ಯಕ್ತಿಗಳು, ಅನಿರೀಕ್ಷಿತ ತಿರುವುಗಳು ಒಂದಲ್ಲೊಂದು ನಮ್ಮನ್ನು ಪರಿಪಕ್ವಗೊಳಿಸುತ್ತಾ ಸಾಗುತ್ತದೆ. ಗೆದ್ದಾಗ ಬೀಗುವುದಕ್ಕಿಂತಲೂ ಸೋತಾಗ ಸಮಾಧಾನದಿಂದಿರುವ ಮನಸ್ಥಿತಿ ಹೆಚ್ಚು ಸೂಕ್ತ ಮತ್ತು ಅರ್ಥಪೂರ್ಣ. ಯಾಕೆಂದರೆ ಅದು ನಿಜವಾದ ಗೆಲುವಿನ, ಪರಿಶ್ರಮದ ಗೆಲುವಿನ ರುಚಿಯ ದಾರಿಯನ್ನು ತೋರಿಸುತ್ತದೆ. ಆಗ ಇರುವುದು ಅಹಂಕಾರ ಭಾವ ಅಲ್ಲ, ಬದಲಾಗಿ ಸಂತೃಪ್ತಿಯ ಕಣ್ಣೀರು. ಗೆದ್ದಾಗ ನೂರು ಕೈಗಳು ನಿಮ್ಮನ್ನು ಅಭಿನಂದಿಸಬಹುದು. ಸೋತಾಗ ನಿಮ್ಮವರು, ನಿಮ್ಮವರು ಎನಿಸಿಕೊಂಡವರು ಪರಿಸ್ಥಿತಿಯ ಕೈಗೊಂಬೆಗಳಾಗಿ ಮುಖ ತಿರುಗಿಸುವುದು ದು:ಖದ ಮಧ್ಯದಲ್ಲೂ ಅವರ ಬಗ್ಗೆ ಕನಿಕರ ಹುಟ್ಟಿಸುವಂತಿರುತ್ತದೆ.

ಗೆಲುವು ಒಂದು ಮುಖವನ್ನಷ್ಟೇ ಪರಿಚಯಿಸಿದರೆ ಸೋಲು ನೂರು ಮುಖಗಳನ್ನು, ಅವಕಾಶಗಳನ್ನು ತೆರೆದಿಡುತ್ತದೆ. ಸೋಲಿನ ಆಘಾತ, ಅವಮಾನದ ಮಧ್ಯೆ ಸರಿಯಾದ ಆಯ್ಕೆಯ ಧೈರ್ಯ ಮಾಡಬೇಕಷ್ಟೆ. ಜೀವನದಲ್ಲಿ ಸ್ವಾಭಿಮಾನ, ಸಭ್ಯತೆಯಿಂದ ಬದುಕುವವರಿಗಷ್ಟೇ ಸೋಲು ಆಘಾತ ನೀಡುವುದು ಮತ್ತು ಪುಟಿದೇಳುವ ಸಂಕಲ್ಪ ಮೂಡಿಸುವುದು. ಪರಿಸ್ಥಿತಿಯ ಕೈಗೊಂಬೆಯಾಗಿ ಸ್ವಾಭಿಮಾನ ಬಿಟ್ಟು ಸಂದರ್ಭಕ್ಕನುಗುಣವಾಗಿ ನೇತಾಡುವವರಿಗೆ ಇದು ಅನ್ವಯಿಸುವುದಿಲ್ಲ. ಅವರು ಹೊರಗಿನ ಕೃತಕ ಪ್ರಕಟೀಕರಣದ ಜಾಣ್ಮೆಯನ್ನು ನಾಜೂಕಾಗಿ ನಿಭಾಯಿಸಬಲ್ಲವರಾಗಿರುತ್ತಾರೆ.

ಕೆಲವು ಕಡೆ ಗುಣಾತ್ಮಕ ಸ್ವಭಾವ ವ್ಯಕ್ತಿತ್ವಕ್ಕಿಂತಲೂ, ಸಂಖ್ಯಾತ್ಮಕ ಬಲ ಪ್ರಮುಖವಾದಾಗ ಅಲ್ಲಿ ಇಂತಹ ಕಪಟಿಗಳಿಗೆ, ವಂಚಕರಿಗೆ ರಕ್ಷಣೆ ಸಿಗುತ್ತದೆ. ಮತ್ತು ಅವರ ಎಷ್ಟೇ ದೊಡ್ಡ ತಪ್ಪುಗಳು ಸಣ್ಣದಾಗಿ ಕಾಣುತ್ತದೆ. ಅಲ್ಲಿ ಅವರ ಗುಣ, ಸ್ವಭಾವ, ಆದರ್ಶ, ಸಂಸ್ಕಾರ ಯಾವುದೂ ಮಾನದಂಡವಾಗುವುದಿಲ್ಲ. ಸಂಘಟನಾತ್ಮಕವಾಗಿ ಗುರುತಿಸಿಕೊಳ್ಳದವನ ಸಣ್ಣ ತಪ್ಪುಗಳೂ ಮೇಲೆ ರಕ್ಷಿಸಲ್ಪಟ್ಟವರಿಂದಲೇ ಭೂತಕನ್ನಡಿಯಲ್ಲಿ ಪ್ರದರ್ಶಿಸಲ್ಪಡುತ್ತದೆ. ಈ ಎಲ್ಲಾ ಸಂದರ್ಭಗಳಲ್ಲೂ ತಾಳ್ಮೆ, ಸಹನೆ, ಸಮಾಧಾನ, ನಂಬಿಕೆ ಮುಖ್ಯವೇ ಹೊರತು, ಸೋಲಿನಿಂದ ಹೊರಬರಲು ಸ್ವಾಭಿಮಾನ, ನಮ್ಮ ಆದರ್ಶ ಬಿಟ್ಟು ಬಿಡುವುದಲ್ಲ. ಗಾಢ ಅಂಧಕಾರದಲ್ಲಿ ಮಾತ್ರವೇ ನಕ್ಷತ್ರಗಳು ಹೆಚ್ಚು ಹೊಳೆಯಲು ಸಾಧ್ಯ. ಹಾಗೆಯೇ ನಮ್ಮ ಸುತ್ತಮುತ್ತ ಎಂತದ್ದೇ ಕೆಟ್ಟ ಪರಿಸ್ಥಿತಿ, ಮನಸ್ಥಿತಿಗಳಿದ್ದರೂ ಅದರ ಮಧ್ಯೆ ಹೊಳೆಯುವ ನಕ್ಷತ್ರಗಳಾಗೋಣ.

**–ಮಹೇಶ್ ನಿಟಿಲಾಪುರ**

## ಶಂಕರ ಪ್ರತಿಷ್ಠಾನ (ರಿ), ಕಾರ್ಕಳದಲ್ಲಿ ಶಿವರಾತ್ರಿ

ಕಾರ್ಕಳ ಸಂಘದ ಕಚೇರಿಯಲ್ಲಿ ಜರುಗಿದ ಶಿವರಾತ್ರಿ ಪೂಜೆಯು ಬಹಳ ವಿಜೃಂಭಣೆಯಿಂದ ಶ್ರೀ ಸತೀಶ್ ಭಟ್ ರವರ ಪೌರೋಹಿತ್ಯದಲ್ಲಿ ಜರುಗಿತು. ಸುಮಾರು 50 ಜನ ಸಮಾಜ ಭಾಂದವರು ಪೂಜೆಯಲ್ಲಿ ಭಾಗವಹಿಸಿ ಶ್ರೀ ದೇವರ ಪ್ರಸಾದ ಸ್ವೀಕರಿಸಿದರು. ಅಂದಿನ ಉಪಹಾರದ ಪ್ರಾಯೋಜಕತ್ವವನ್ನು ಶ್ರೀ ಮನೋಹರ್ ರಾವ್, ಸಾವಿತ್ರಕ್ಕ ದಂಪತಿಗಳು ವಹಿಸಿಕೊಂಡು, ಹಾಗೂ  ಬಗೆ ಬಗೆಯ ಉಪಹಾರವನ್ನು ಪ್ರಸಾದ ರೂಪದಲ್ಲಿ ಎಲ್ಲರೂ ಸ್ವೀಕರಿಸಿದರು. ಪ್ರತಿಷ್ಠಾನದ ಮಹಿಳಾ ವಿಭಾಗದ ವತಿಯಿಂದ ಸೊಗಸಾದ ಭಜನೆಯೊಂದಿಗೆ ಶಿವನನ್ನು ಸ್ತುತಿಸಿದರು. ಭವಾನಿಶಂಕರ್ ಹಾಗೂ ಸೌಮ್ಯ ದಂಪತಿಗಳು ಬಗೆ ಬಗೆಯ ಖಾದ್ಯ ತಯಾರಿಕೆ ಹಾಗೂ ಪೂಜೆಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿದ್ದರು. ಪೂಜೆಗೆ ಬಂದು ಪ್ರಸಾದ ಸ್ವೀಕರಿಸಿದ ಎಲ್ಲಾ ಸಮಾಜ ಬಾಂಧವರಿಗೆ, ಸಂಘದ ಎಲ್ಲಾ ಪದಾಧಿಕಾರಿಗಳಿಗೆ, ಉಪಹಾರದ ಪ್ರಾಯೋಜಕತ್ವ ವಹಿಸಿಕೊಂಡ ಸಾವಿತ್ರಕ್ಕ ದಂಪತಿಗಳು, ಶಿವರಾತ್ರಿಯ ಪೂಜೆಗೆ ತಮ್ಮ ಮನೆಯನ್ನೇ ಬಿಟ್ಟು ಕೊಟ್ಟ ಭವಾನಿಶಂಕರ್ ದಂಪತಿಗಳಿಗೆ ಹಾಗೂ ತನು ಮನ ಧನ ದಿಂದ ಸಹಕರಿಸಿದ ಎಲ್ಲಾ ಸಮಾಜ ಭಾಂದವರಿಗೆ, ಅಂದಿನ ಪೊರೋಹಿತ್ಯವನ್ನು ಯಾವ ಪೌರೋಹಿತ್ಯ ದಕ್ಷಿಣೆಯನ್ನು ಸ್ವೀಕರಿಸದೆ ಅಚ್ಚುಕಟ್ಟಾಗಿ ದೇವರ ಪೂಜೆಯನ್ನು ನಡೆಸಿಕೊಟ್ಟ ಶ್ರೀ ಸತೀಶ್ ಭಟ್ಟರಿಗೆ, ಸುಶ್ರಾವ್ಯ ಭಜನೆಯನ್ನು ನಡೆಸಿಕೊಟ್ಟ ಮಹಿಳಾ ವಿಭಾಗದವರಿಗೆ ಹಾಗೂ ಸಮಸ್ತರಿಗೆ ಅನಂತಾನಂತ ವಂದನೆಗಳು. ಮುಂದೆಯೂ ನಮ್ಮ ಸಂಘಟನೆಯನ್ನು ಬಲಪಡಿಸಲು ನಿಮ್ಮ ಹೆಚ್ಚಿನ ಸಹಕಾರವನ್ನು ನಿರೀಕ್ಷಿಸುವ,

**–ಅಧ್ಯಕ್ಷರು/ಕಾರ್ಯದರ್ಶಿ ಹಾಗೂ ಎಲ್ಲಾ ಪದಾಧಿಕಾರಿಗಳು**

## ಕೆರ್ಗಾಲು ಭಗವತಿ ದೇವಸ್ಥಾನದ ವತಿಯಿಂದ ವೀರೇಂದ್ರ ಹೆಗ್ಗಡೆಯವರ ಭೇಟಿ

ಶ್ರೀ ಭಗವತಿ ದುರ್ಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರದ ಕುರಿತು ಈವರೆಗೆ ಆಗಿರುವ ಕಾಮಗಾರಿಯ ಮಾಹಿತಿ ನೀಡಿ, ಶ್ರೀ ಮಂಜುನಾಥ ಸ್ವಾಮಿ ಹಾಗೂ ಶ್ರೀ ಡಾ|ಡಿ ವೀರೇಂದ್ರ ಹೆಗ್ಗಡೆಯವರಲ್ಲಿ ಅನುಗ್ರಹ, ಆಶೀರ್ವಾದ ಜತೆಯಲ್ಲಿ ಸಲಹೆ ಸೂಚನೆ ಪಡೆಯಲು ಮಾ.3ರಂದು ಡಾ.ಹೆಗ್ಗಡೆಯವರ ಬೀಡಿನಲ್ಲಿ ಭೇಟಿ ಮಾಡಿದ ಸಂದರ್ಭದಲ್ಲಿ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷರಾದ ಅಪ್ಪಣ್ಣ ಹೆಗ್ಡೆ, ಆಡಳಿತ ಮೊಕ್ತೇಸರರಾದ ಎಸ್.ಎಸ್.ಭಗವತಿ. ಕಾರ್ಯಾಧ್ಯಕ್ಷರಾದ ಪಡುಕೋಣೆ ನರಸಿಂಹ ಪೂಜಾರಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸುಂದರ ಕೊಠಾರಿ, ಪ್ರಧಾನ ಕಾರ್ಯದರ್ಶಿ ಕೆ. ಪುಂಡಲೀಕ ನಾಯಕ ಸಮಿತಿ ಅಧ್ಯಕ್ಷ, ಸಂದೀಪ ಭಗವತಿ ಇವರು ಉಪಸ್ಥಿತರಿದ್ದರು.

## “ಬಾಳಿನ ಗಿಡ” ಕಾದಂಬರಿಯ 8ನೇಯ ಮರು ಮುದ್ರಣ

ನಮ್ಮವರೇ ಆದ ಮಾರ್ಪಳ್ಳಿ ಹರಿದಾಸ ರಾಯರು ಬರೆದ “ಬಾಳಿನ ಗಿಡ” ಕಾದಂಬರಿಯು 1949 ರಲ್ಲಿ ಪ್ರಥಮ ಮುದ್ರಣ ಕಂಡಿತು. ಇದಕ್ಕೆ ರಾಷ್ಟ್ರ ಕವಿ ಶ್ರೀಮಾನ್ ಗೋವಿಂದ ಪೈ. ಯವರು ಮುನ್ನುಡಿ ಬರೆದಿದ್ದರು. ಇದು 1949 ರಿಂದ 1969 ರವರೆಗೆ 6 ಬಾರಿ ಪುನಃ ಮುದ್ರಣಗೊಂಡಿತು. ಈ ಕಾದಂಬರಿಯು ಮದ್ರಾಸ್ ವಿಶ್ವವಿದ್ಯಾಲಯದ ಇಂಟರ್‌ಮೀಡಿಯೆಟ್ ವಿದ್ಯಾರ್ಥಿಗಳಿಗೆ 1955 ರಿಂದ 1962 ರವರೆಗೆ ಪಠ್ಯ ಪುಸ್ತಕವಾಗಿತ್ತು ಮತ್ತು ಮೈಸೂರು ವಿಶ್ವವಿದ್ಯಾಲಯದ ಬಿ.ಎ. ವಿದ್ಯಾರ್ಥಿಗಳಿಗೂ 1959–60 ರಲ್ಲಿ ಪಠ್ಯ ಪುಸ್ತಕವಾಗಿತ್ತು. ಈ ಕಾದಂಬರಿ ಬರೆದು 70 ವರ್ಷಗಳ ನಂತರ ಹಾಗೂ 7 ನೇ ಮುದ್ರಣ 1969 ರಲ್ಲಿ ಆಗಿ 50 ವರ್ಷಗಳ ನಂತರ ಇದೀಗ 8 ನೇ ಬಾರಿ ಮರು ಮುದ್ರಣಗೊಂಡಿದೆ ಎಂದು ತಿಳಿಸಲು ತುಂಬಾ ಸಂತೋಷವಾಗುತ್ತಿದೆ. ಇದರ ಪ್ರಕಾಶಕರು, ಸಾಹಿತ್ಯ ಭಂಡಾರ, ಬಳೆ ಪೇಟೆ ಬೆಂಗಳೂರು–560053.

**ಬೈಲಕೆರೆ ಗೋವಿಂದ ರಾವ್, ಬೆಂಗಳೂರು.** ಮೊಬೈಲ್ : 9945695360

Buying and selling shares
as easy as checking your emails
Sharekhan Online Trading Account Features:
Your bank account gets directly linked to trading account
Can do direct fund transfer from any of 11 leading banks
Choose your trading account, Classic, FastTrade, TradeTiger
Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
Visit : www.sharekhan.com

SAMPATH KUMAR
Mobile : 9741508881
TRISHULINI TOURIST
The Tourist People
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಸಂಪಾದಕೀಯ.....

ಹೊರಗಿನ ಜನರ ಭೇಟಿ ಇಲ್ಲದಿದ್ದರೂ ತುಂಬಾ ಜನರು ಸೇರಿ ಕೆಲಸ ಮಾಡುವ ಫಾಕ್ಟರಿಗಳು ಹಾಗೂ ಶಾಲೆಗಳಲ್ಲಿಯೂ ಹಲವಾರು ಬದಲಾವಣೆಗಳು ಬೇಕು. ಇಂತಹಾ ಸ್ಥಳಗಳು ವಿಶಾಲವಾಗಬೇಕು, ಗಾಳಿ ಬೆಳಕಿನ ವ್ಯವಸ್ಥೆ ಉತ್ತಮವಾಗಬೇಕು. ಏರ್ ಕಂಡೀಶನರ್ ತೆಗೆಯಬೇಕು. ಕೆಲಸಗಾರರ ಗುಂಪುಗಳು ಸಣ್ಣದಿರಬೇಕು, ಇಬ್ಬರ ನಡುವೆ ಅಂತರವಿರಬೇಕು, ಶಾಲೆಗಳಲ್ಲಿ ಒಂದೊಂದು ಕ್ಲಾಸುಗಳಲ್ಲಿರುವ ಮಕ್ಕಳ ಸಂಖ್ಯೆ ಕಡಿಮೆ ಇರಬೇಕು. ಆನ್‌ಲೈನ್ ಪಾಠಗಳು, ಟ್ಯೂಷನ್‌ಗಳು ಮೀಟಿಂಗ್‌ಗಳು ಆರಂಭವಾಗಬೇಕು.

ಇನ್ನು ಮುಂದೆ ದೊಡ್ಡದೊಡ್ಡ ಸಮಾರಂಭಗಳಿಗೆ ಕಡಿವಾಣ ಬಿದ್ದಂತೆಯೇ ಸರಿ. ಜಾತ್ರೆ, ಸಮಾವೇಶ, ಪ್ರಾರ್ಥನಾಕೂಟ, ಡಿಸ್ಕೋಥೆಕ್‌ಗಳು, ಚಿತ್ರಮಂದಿರಗಳು, ಮಾಲ್‌ಗಳು ಕೊರೋನಾದ ಹೈರಿಸ್ಕ್ ಜೋನ್‌ಗಳು. ಹಿಂದೆ “ನೂತನ ವಧೂವರರಿಗೆ ಶುಭವಾಗಲಿ” ಎಂದು ಮುಹೂರ್ತದ ಸಮಯದಲ್ಲಿ ಟೆಲಿಗ್ರಾಂ ಕಳಿಸುತ್ತಿದ್ದ ರೀತಿಯಲ್ಲಿ ಮುಹೂರ್ತದ ಸಮಯದಲ್ಲಿ ಆನ್‌ಲೈನ್ ಮುಖಾಂತರ

(...2ನೇ ಪುಟದಿಂದ)

ಪ್ರತ್ಯಕ್ಷರಾಗಿ ಶುಭ ಹಾರೈಸುವ ದಿನಗಳು ಬಂದಿದೆ.

ನಿರುದ್ಯೋಗ ಹೆಚ್ಚಬಹುದು, ಆರ್ಥಿಕ ಪರಿಸ್ಥಿತಿ ಕುಸಿಯಬಹುದು ಇತ್ಯಾದಿ ಊಹನೆಗಳು ಇವೆ. ಆದರೆ ನನ್ನ ಊಹೆಯ ಪ್ರಕಾರ ನಮ್ಮ ದೇಶದ ಜನರು ಮೂಲತಃ ಕೃಷಿಕರಾದುದರಿಂದ ಹಾಗೂ ಮಿತವ್ಯಯಿಗಳಾದುದರಿಂದ ಆರ್ಥಿಕ ತಜ್ಞರ ಲೆಕ್ಕಾಚಾರದಲ್ಲಿ ಕುಸಿತ ಕಾಣಬಹುದೇ ಹೊರತು ಜನಸಾಮಾನ್ಯರ ಜೀವನಕ್ಕೆ ತೊಂದರೆಯಾಗದು. ಕೊರೊನಾ ಖಾಯಿಲೆಯ ಹಿನ್ನೆಲೆಯಲ್ಲಿ ಯೋಚಿಸುವುದಾದರೆ ಕೃಷಿ ಅತ್ಯಂತ ಸುರಕ್ಷಿತ ಉದ್ಯೋಗ. ಹಾಗಾಗಿ ಈಗ ಲಾಕ್‌ಡೌನ್ ನೆಪದಲ್ಲಿ ಊರು ಸೇರಿರುವ ಕಾರ್ಮಿಕರು ಈ ಮಳೆಗಾಲದಲ್ಲಿ ಪೇಟೆಯ ಕಡೆಗೆ ತಲೆ ಹಾಕದೆ ಕೃಷಿಯಲ್ಲಿ ತೊಡಗಿಕೊಳ್ಳುವುದು ನಿಶ್ಚಿತ. ಹಾಗಾಗಿ ಈ ಕ್ಷೇತ್ರದಲ್ಲಿ ಈ ಭಾರಿ ಪ್ರಗತಿ ನಿರೀಕ್ಷಿಸಬಹುದು. ಹಾಗೆಯೇ ನಗರ ಕೇಂದ್ರೀಕೃತ ವೃತ್ತಿಗಳಲ್ಲಿ “ನಿಧಾನ”, “ಅಂತರ”, “ಸ್ವಚ್ಛತೆ”ಗಳಿಗೆ ಪ್ರಾಧಾನ್ಯತೆ ನೀಡಲೇಬೇಕಾದ ಅನಿವಾರ್ಯತೆ ಒದಗಿರುವುದರಿಂದ ಇಬ್ಬರ ಕೆಲಸದ ಜಾಗದಲ್ಲಿ ಮೂವರ ಅಥವಾ ನಾಲ್ವರ ಅನಿವಾರ್ಯತೆ ಉಂಟಾಗುವುದು. ಆದುದರಿಂದ ನಿರುದ್ಯೋಗದ ಸಮಸ್ಯೆ ಕಡಿಮೆಯಾದೀತು ಅನಿಸುತ್ತದೆ. ಆರೋಗ್ಯ ಕ್ಷೇತ್ರದ ಅಗತ್ಯತೆಯನ್ನು ಪ್ರತಿಯೊಬ್ಬರೂ ಮನಗಂಡಿರುವುದರಿಂದ ಈ ಕ್ಷೇತ್ರದಲ್ಲಿ ಅಪಾರ ಬೆಳವಣಿಗೆಯಾಗುವುದು ನಿಶ್ಚಿತ. ಕುಸಿತ ಕಂಡಿರುವ ಕ್ಷೇತ್ರಗಳಾದ ಪ್ರವಾಸೋದ್ಯಮ, ಮನರಂಜನೆ, ಮಾಲ್ ಇತ್ಯಾದಿಗಳಲ್ಲಿ ಉದ್ಯೋಗಿಗಳಾಗಿರುವರು ಈ ಕ್ಷೇತ್ರಗಳ ಪುನಶ್ಚೇತನಕ್ಕೆ ಕಾಯದೆ ಇತರ ಕ್ಷೇತ್ರಗಳ ಉದ್ಯೋಗಗಳ ಕಡೆಗೆ ಮುಖಮಾಡುವುದು ಶ್ರೇಯಸ್ಕರವಾಗಿದೆ

ಕೊನೆಯದಾಗಿ ನಮ್ಮೆಲ್ಲರ ಮನ:ಸ್ಥಿತಿಯಲ್ಲಿ ತರಬೇಕಾದ ಬದಲಾವಣೆಯೂ ಅತೀ ಮುಖ್ಯ ಬದಲಾವಣೆಯಾಗಿದೆ. ತಾನು ಬದಲಾಗದೆ ದೇಶ ಬದಲಾಗದು ಅಲ್ಲವೇ? ಜನಸಂದಣಿ ಕಡಿಮೆಯಿರಲು ಆಫೀಸಿನವರು ಹಾಗೂ ವ್ಯಾಪಾರಸ್ಥರು ಅಪಾಯಿಂಟ್‌ಮೆಂಟ್ ಕೊಟ್ಟರೂ ಜನರು ಸಮಯ ಪಾಲನೆ ಮಾಡದಿದ್ದರೆ ಏನೂ ಉಪಯೋಗವಾಗದು. ಸಮಯ ಪಾಲನೆಯ ಪರಿಪಾಟವನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕಾಗುತ್ತದೆ. ಹಾಗೆಯೇ ನಾವು ಸುಮ್ಮಸುಮ್ಮನೆ ಅವಸರ ಮಾಡುವ ಹಾಗೂ ಪ್ರತಿಯೊಂದಕ್ಕೂ ಮುಗಿಬೀಳುವ ಅಭ್ಯಾಸವನ್ನೂ ತ್ಯಜಿಸಬೇಕಾಗುತ್ತದೆ. ಅನಗತ್ಯವಾಗಿ ಮನೆಮಂದಿಯೆಲ್ಲಾ ಸಾರ್ವಜನಿಕ ಸ್ಥಳಗಳಿಗೆ ಭೇಟಿಯಿಡುವುದು ಮಾಡಬಾರದು. ಮಕ್ಕಳು ವೃದ್ಧರು ಗರ್ಭಿಣಿಯರು ಆದಷ್ಟು ಸಾರ್ವಜನಿಕ ಸ್ಥಳಗಳಿಗೆ, ಅದರಲ್ಲೂ ಆಸ್ಪತ್ರೆಗಳಿಗೆ ಸ್ವಂತ ಚಿಕಿತ್ಸೆಗೆ ಹೊರತುಪಡಿಸಿ ಭೇಟಿ ನೀಡಬಾರದು. ಸಾರ್ವಜನಿಕ ಸ್ಥಳಗಳಿಗೆ ಹೋಗುವಾಗ ಆದಷ್ಟು ಕಡಿಮೆ ವಸ್ತುಗಳನ್ನು ಒಯ್ಯಬೇಕು. ತನ್ನ ಸ್ವಂತ ವಸ್ತುಗಳಾದ ಬ್ಯಾಗ್ ಮೊಬೈಲ್ ಇತ್ಯಾದಿಗಳನ್ನು ಆವಾಗಾವಾಗ ಸ್ವಚ್ಛಗೊಳಿಸುವುದು ತನ್ನ ಆರೋಗ್ಯಕ್ಕೆ ಅಗತ್ಯ ಎಂಬುದನ್ನು ಮನಗಾಣಬೇಕು. ಉಗುರು ಕಚ್ಚುವುದು, ಬಾಯಿ ಮೂಗುಗಳಿಗೆ ಕೈ ಹಾಕುವುದು, ಇನ್ನೊಬ್ಬರ ಪರಿವೆ ಇಲ್ಲದಂತೆ ಕೆಮ್ಮುವುದು ಸೀನುವುದು ಮಾಡಬಾರದು, ಆವಾಗಾವಾಗ ಕೈ ತೊಳೆಯುವುದು ರೂಢಕ್ರಿಯೆಯಂತಾಗಬೇಕು. ಜೊತೆಗೆ ಇನ್ನೊಬ್ಬರ ಹಕ್ಕುಗಳನ್ನು ಗೌರವಿಸುವುದು ನಮ್ಮ ಕರ್ತವ್ಯವಾಗಬೇಕು. ಹೀಗೆ ಕೊರೊನಾ ನಮ್ಮ ಜೀವನದಲ್ಲಿ ಬಲವಂತವಾಗಿ ತರುತ್ತಿರುವ ಬದಲಾವಣೆಗಳು ಒಳ್ಳೆಯದೇ ಆಗಿವೆಯಲ್ಲವೇ?

## ನಿಧನ



### ಭುಜಂಗ ರಾವ್ ಯಾನೆ ಬಾಬಣ್ಣ

ಉಡುಪಿ ಚಿಟ್ಪಾಡಿಯ ಭುಜಂಗ ರಾವ್ ಯಾನೆ ಬಾಬಣ್ಣ (89 ವರ್ಷ) ಅಲ್ಪ ಕಾಲದ ಅಸೌಖ್ಯದಿಂದ ದಿನಾಂಕ 04.04.2020 ರಂದು ಚಿಟ್ಪಾಡಿಯ ಸ್ವಗ್ರಹದಲ್ಲಿ ನಿಧನರಾದರು. ಮೃತರು ನಾಲ್ವರು ಪುತ್ರರು ಇಬ್ಬರು ಪುತ್ರಿಯರು ಸಹಿತ ಅಪಾರ ಬಾಂಧವರನ್ನು ಅಗಲಿದ್ದಾರೆ.

★★★★ ★★★★

### ಶ್ರೀಮತಿ ಮೀನಾಕ್ಷಿ

ದಿ| ಅಜೆಕಾರು ರತ್ನಾಕರ ರಾಯರ ಪತ್ನಿ ಶ್ರೀಮತಿ ಮೀನಾಕ್ಷಿ ಇವರು ತಾ.3.05.2020 ರಂದು ಮೈಸೂರಿನಲ್ಲಿ ನಿಧನ ಹೊಂದಿದರು.

★★★★ ★★★★

### ಶ್ರೀಮತಿ ಮಾಂಟ್ರಾಡಿ ಪ್ರಭಾವತಿ ರಾವ್

ದಿ| ಪಿ.ಕೆ ಸದಾಶಿವರಾಯರ ಪತ್ನಿ ಮಾಂಟ್ರಾಡಿ ಪ್ರಭಾವತಿ ರಾವ್‌ರವರು ತಾ.2.05.2020 ರಂದು ಚೆನ್ನೈಯಲ್ಲಿ ನಿಧನ ಹೊಂದಿದರು.

★★★★ ★★★★

### ಶ್ರೀಮತಿ ವಸಂತಿ ಚಂದ್ರಶೇಖರ ರಾವ್ ಕರ್ವಾಲು

ದಾದಿಯರ ಟ್ಯೂಟರ್ ಮತ್ತು ವಾರ್ಡನ್ ಆಗಿ ಸುಮಾರು 4 ದಶಕ ಸೇವೆ ಸಲ್ಲಿಸಿದ್ದ ವಸಂತಿ ರಾವ್ ಕರ್ವಾಲು (79) ಅವರು ತಾ.11.04.2020ರಂದು ಮಂಗಳೂರಿನ ಪುತ್ರನ ಮನೆಯಲ್ಲಿ ನಿಧನ ಹೊಂದಿದರು. ಅವರು ಇಬ್ಬರು ಪುತ್ರನನ್ನು ಅಗಲಿದ್ದಾರೆ. ಮಣಿಪಾಲ ಕೆ.ಎಂ.ಸಿ.ಯಲ್ಲಿ ದಾದಿಯರಿಗೆ ತರಬೇತಿ ನೀಡುವ ಟ್ಯೂಟರ್ ಆಗಿ 25 ವರ್ಷ ಸೇವೆ ಸಲ್ಲಿಸಿದ ಬಳಿಕ ಅವರು ಒಮಾನ್‌ನಲ್ಲಿ 7 ವರ್ಷ ಸೇವೆ, ಧಾರವಾಡದ ಎಸ್.ಡಿ.ಎಂ. ಮೆಡಿಕಲ್ ಕಾಲೇಜು ಹಾಗೂ ಮುರುಡೇಶ್ವರದ ಆರ್.ಎನ್. ಶೆಟ್ಟಿ ಆಸ್ಪತ್ರೆಯಲ್ಲಿ ಟ್ಯೂಟರ್, ವಾರ್ಡನ್ ಆಗಿ ಸೇವೆ ಸಲ್ಲಿಸಿದ್ದರು.

★★★★ ★★★★

### ಶ್ರೀಮತಿ ವಾರಿಜ

ಕಡಬ ಕೀರ್ತಿಶೇಷ ರಾಮದಾಸ ರಾಯರ ಧರ್ಮಪತ್ನಿ ಶ್ರೀಮತಿ ವಾರಿಜ (80 ವರ್ಷ) ಇವರು ತಾ.07.04.2020 ರಂದು ಶಿವೈಕ್ಯರಾದರು. ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧುಬಳಗದವರನ್ನು ಅಗಲಿರುತ್ತಾರೆ. ವಾರಿಜಮ್ಮನವರು ಮೂಲತಃ ಕಾರಿಂಜಕೋಡಿಯವರಾಗಿದ್ದು ಕೋಡಿ ನಾರಾಯಣ ರಾಯರ ಸಹೋದರಿಯಾಗಿರುತ್ತಾರೆ. ಮೃತರ ಆತ್ಮಕ್ಕೆ ಸದ್ಗತಿಯನ್ನು ಬಯಸುತ್ತೇವೆ.

★★★★ ★★★★

### ಕಬ್ಬಿನಾಲೆ ರಾಮಣ್ಣ ಹೆಬ್ಬಾರ್

ಕಬ್ಬಿನಾಲೆ ರಾಮಣ್ಣ ಹೆಬ್ಬಾರ್‌ರವರು (88) ತಾ.06.04.2020ರಂದು ಮಂಗಳೂರಿನಲ್ಲಿ ನಿಧನರಾದರು. 36 ವರ್ಷಗಳ ಕಾಲ ಶಿಕ್ಷಕರಾಗಿ, ಮುಖ್ಯ ಶಿಕ್ಷಕರಾಗಿ, ಹೆಬ್ರಿ, ಕನ್ಯಾನ, ಉಡುಪಿ ಸೌತ್ ಹಾಗೂ ಕಟಪಾಡಿ ಶಾಲೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಪತ್ನಿ, ಪುತ್ರ ಮತ್ತು ಪುತ್ರಿಯರನ್ನು ಅಗಲಿದ್ದಾರೆ.

★★★★ ★★★★

### ಹೆಚ್.ಚಂದ್ರಶೇಖರ ಹೆಬ್ಬಾರ್

ಹೆಚ್.ಚಂದ್ರಶೇಖರ ಹೆಬ್ಬಾರ್ (70ವ), ಹೆಮ್ಮಾಡಿ ಇವರು ತಾ.8.5.2020ರಂದು ನಿಧನರಾದರು. ಅವರು ಮೂವರು ಪುತ್ರಿಯರು ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ.

★★★★ ★★★★

### ಶ್ರೀಮತಿ ಸತ್ಯಮ್ಮ

ಕಬ್ಬನಾಲೆ ದಿ| ನಾಗಪ್ಪ ಹೆಬ್ಬಾರ್‌ರವರ ಪತ್ನಿ ಶ್ರೀಮತಿ ಸತ್ಯಮ್ಮರವರು (78ವ) ತಾ.27.4.2020ರಂದು ನಿಧನ ಹೊಂದಿದರು.

## ವೈದ್ಯಕೀಯ ನೆರವಿಗೆ ಮನವಿ

ಮಾರ್ಪಳ್ಳಿಯ ಶ್ರೀ ಎಂ.ಬಾಲಚಂದ್ರ ರಾವ್ ಇವರು ಲಿವರ್‌ನ ಸಮಸ್ಯೆಯಿಂದಾಗಿ ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದು ಅವರ ಚಿಕಿತ್ಸೆಗೆ ರೂ.30 ಲಕ್ಷ ಅಗತ್ಯವಿರುತ್ತದೆ. ನಮ್ಮ ಸಮಾಜದ ಸಹೃದಯಿಗಳಿಂದ ಧನಸಹಾಯಕ್ಕಾಗಿ ವಿನಂತಿಸಿದ್ದಾರೆ.

**A/c No. : 02322210009240**
**IFSC : SYNB0000232**
**Syndicate Bank, Manipal Branch**

## ಶುಭ ಜನನ

ಪರ್ಕಳ ಬಡಗುಬೆಟ್ಟಿನ ಯು. ಕಾರ್ತಿಕ್ ಕುಮಾರ್ ಮತ್ತು ವಿಜಯಶ್ರೀ ದಂಪತಿಗಳಿಗೆ ತಾ.20.4.2020ರಂದು ಗಂಡು ಮಗುವಿನ ಜನನ.

★★★★ ★★★★


ಕಾಪುವಿನ ಯು.ಅಕ್ಷಯ್ ಕುಮಾರ ಮತ್ತು ಸವಿತಾ ದಂಪತಿಗಳಿಗೆ ತಾ.5.5.2020ರಂದು ಹೆಣ್ಣು ಮಗುವಿನ ಜನನ.



## ವೃಷಭ ಮಾಸದ ವಿಶೇಷ ದಿನಗಳು

| | | | |
|---|---|---|---|
| 14–05–2020 | ವೃಷಭ ಸಂಕ್ರಮಣ | 06–06–2020 | ಗ್ರೀಷ್ಮ ಋತು ಜ್ಯೇಷ್ಠ ಮಾಸದ ಕೃಷ್ಣಪಕ್ಷಾರಂಭ |
| 18–05–2020 | ಸರ್ವೈಕಾದಶಿ | 08–06–2020 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 09–32ಕ್ಕೆ |
| 22–05–2020 | ಅಮಾವಾಸ್ಯೆ | 14–06–2020 | ಮಿಥುನ ಸಂಕ್ರಮಣ |
| 23–05–2020 | ಗ್ರೀಷ್ಮ ಋತು ಜ್ಯೇಷ್ಠ ಮಾಸದ ಶುಕ್ಲಪಕ್ಷಾರಂಭ | 17–06–2020 | ಸರ್ವೈಕಾದಶಿ |
| 02–06–2020 | ಸರ್ವೈಕಾದಶಿ | 20–06–2020 | ದಕ್ಷಿಣಾಯನ ಆರಂಭ |
| 05–06–2020 | ಹುಣ್ಣಿಮೆ | | |

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

N. Laxmi Prasad

ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS


ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯಶಸ್ವೀ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



## ಗೈಡ್ ಕ್ಯಾಪ್ಟನ್ ಸಾವಿತ್ರೀ ಮನೋಹರ್‌ಗೆ ಸನ್ಮಾನ




35 ವರ್ಷಗಳಿಂದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸಕ್ರಿಯ ಸದಸ್ಯರಾಗಿರುವ ನಿವೃತ್ತ ಸರಕಾರಿ ಪ್ರೌಢಶಾಲೆಯ ರಾಜ್ಯ ಪ್ರಶಸ್ತಿ ವಿಜೇತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾವಿತ್ರಿ ಮನೋಹರ್ ಅವರನ್ನು ಕಾರ್ಕಳ ರೋಟರಿ ಕ್ಲಬ್‌ನಲ್ಲಿ ರೋಟರಿ ಮಹಿಳಾ ವಿಭಾಗದವರು ಸನ್ಮಾನಿಸಿದರು. ಅಧ್ಯಕ್ಷೆ ಶ್ರೀಮತಿ ಸ್ವಾತಿ ಆಚಾರ್ ಅಧ್ಯಕ್ಷತೆ ವಹಿಸಿ ಸಾವಿತ್ರಿಯವರು ಈ ವಯಸ್ಸಿನಲ್ಲಿಯೂ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸಕ್ರಿಯ ಸದಸ್ಯರಾಗಿರುವರೆಂದೂ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿ ಹಾಗೂ ರಾಜ್ಯ, ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ಪಡೆದು ನಮಗೆಲ್ಲ ಸ್ಫೂರ್ತಿಯಾಗಿದ್ದಾರೆ. ಶ್ರೀಮತಿ ವೃಂದಾ ಹರಿಪ್ರಕಾಶ್ ಸನ್ಮಾನಿತರ ಪರಿಚಯ ಮಾಡಿ ಗೌರವಿಸಿದರು. ಶ್ರೀಮತಿ ಸುವರ್ಣ ನಾಯಕ್, ಶ್ರೀಮತಿ ಕಸ್ತೂರಿ ಕಾರಂತ್, ಶ್ರೀಮತಿ ವಿನಯಾ, ಶ್ರೀಮತಿ ಪದ್ಮಜಾ ಮತ್ತಿತರರು ಜೊತೆಯಾಗಿ ಸನ್ಮಾನಿಸಿದರು. ಕಾರ್ಯದರ್ಶಿ ಧನ್ಯವಾದ ಅರ್ಪಿಸಿದರು.

## ಪಾದೆಬೆಟ್ಟಿನಲ್ಲಿ ಶ್ರೀ ಶಂಕರ ಜಯಂತಿ ಹಾಗೂ ಶ್ರೀ ನರಸಿಂಹ ಜಯಂತಿ



ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ತಾ.28.04.2020ರಂದು ಶ್ರೀ ಶಂಕರ ಜಯಂತಿಯನ್ನು ಆಚರಿಸಲಾಯಿತು. ಶ್ರೀ ಶಂಕರಾಚಾರ್ಯರ ಚಿತ್ರಕ್ಕೆ ಪುಷ್ಪಾಲಂಕಾರ ಮಹಾಪೂಜೆಯನ್ನು ಬ್ರಹ್ಮಶ್ರೀ ಕೃಷ್ಣರಾಜ ಭಟ್ಟರ ಮೂಲಕ ನೆರವೇರಿಸಲಾಯಿತು. ತಾ.06.05.2020 ರಂದು ಶ್ರೀ ದೇವಳದಲ್ಲಿ ವರ್ಷಾವಧಿ ಉತ್ಸವ ಹಾಗೂ ಶ್ರೀ ನರಸಿಂಹ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು. ಪಾವಂಜೆ ಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಶ್ರೀ ದೇವರಿಗೆ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಲಾಯಿತು ದೇವಳದ ಮೊಕ್ತೇಸರರಾದ ಶ್ರೀ ಜಯರಾಮರಾಯರು ಉಪಸ್ಥಿತರಿದ್ದರು

## ಅಕ್ಷರ ದೀವಿಗೆ ಕಾರ್ಯಕ್ರಮಕ್ಕೆ ಚಾಲನೆ



ಕಾರ್ಕಳ ತಾಲೂಕಿನ ಹಿರಿಯ ಮಹಿಳಾ ಸಾಹಿತಿಯವರಾದ ಶ್ರೀಮತಿ ಸಾವಿತ್ರಿ ಮನೋಹರ್ ಕಾರ್ಕಳ ಬಸ್ ನಿಲ್ದಾಣದಲ್ಲಿ ಅಕ್ಷರ ದೀವಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇವರು ಕಾರ್ಕಳ ತಾಲೂಕು ಮಹಿಳಾ ಒಕ್ಕೂಟದ ಜೊತೆ ಕಾರ್ಯದರ್ಶಿ ಯಾಗಿ ಸಮಾಜಸೇವೆಯಲ್ಲಿ ತೊಡಗಿಸಿ ಕೊಂಡಿದ್ದಾರೆ.

## ಪ್ರಾಂಶುಪಾಲರಾಗಿ ಡಾ.ಶೋಭಿತಾ ಸತೀಶ್ ನೇಮಕ



ಪುತ್ತೂರು ವಿವೇಕಾನಂದ ಬಿ.ಎಡ್.ಕಾಲೇಜಿನ ನೂತನ ಪ್ರಾಂಶುಪಾಲರಾಗಿ ಡಾ.ಶೋಭಿತಾ ಸತೀಶ್ ನೇಮಕಗೊಂಡಿದ್ದಾರೆ. ಇವರು ಕೆ.ಎಮ್.ಎಫ್.ನ ಡೆಪ್ಯುಟಿ ಮೇನೇಜರ್ ಡಾ.ಸತೀಶ್ ರಾವ್‌ರವರ ಪತ್ನಿ. ಕಾಸರಗೋಡಿನ ಶ್ರೀ ಮುರಳೀಧರ ಮತ್ತು ಶ್ರೀಮತಿ ರಾಧಾ ಮುರಳೀಧರ ಇವರ ಪುತ್ರಿ.



ಉಡುಪಿ ಕುಕ್ಕಿಕಟ್ಟೆಯ ಪುಣ್ಯಕೋಟಿ ಗೋಸೇವಾ ಬಳಗದ 54ನೇ ತಿಂಗಳ ಗೋಪೂಜೆ ಬೈಲೂರು ಶ್ರೀ ಮಹಿಷಮರ್ದಿನಿ ದೇವಸ್ಥಾನದ ಬಳಿಯಿರುವ ಗೀತಾ ರಾವ್ ಅವರ ಮನೆಯಲ್ಲಿ ನಡೆಯಿತು. ದೇವಸ್ಥಾನದಲ್ಲಿ 6 ಮಂದಿ ಸಮಾಜ ಸೇವಕ-ಸಾಧಕರನ್ನು ಗೌರವಿಸಲಾಯಿತು.

## ಪುಸ್ತಕ ಬಿಡುಗಡೆ



ಉಪ್ಪಿನಂಗಡಿಯ ಉದ್ಯಮಿ ಶ್ರೀ ದಿನಕರ ರಾಯರ ಪತ್ನಿ ಶ್ರೀಮತಿ ಸಪ್ನಾ ದಿನಕರ್‌ರವರು ರಚಿಸಿದ ಪ್ರೇಮಗೀತೆಗಳ ಸಂಕಲನ "ಸಪ್ನಲೋಕ"ದ ಬಿಡುಗಡೆ ಸಮಾರಂಭವು ಪಡುಬಿದ್ರೆ ಬಾಲಗಣಪತಿ ಪ್ರಸನ್ನಪಾರ್ವತಿ ದೇವಸ್ಥಾನದಲ್ಲಿ ತಾ.08-03-2020ರಂದು ನೆರವೇರಿತು ಈ ಸಮಾರಂಭದಲ್ಲಿ ಉಡುಪಿಯ ಡಾ। ವೈ.ಸುದರ್ಶನ್ ರಾವ್, ಬ್ರಹ್ಮಾವರದ ಡಾ.ವೈ.ರವೀಂದ್ರನಾಥ ರಾವ್, ನಟ ಡಾ.ಅಶೋಕ್‌ಕುಮಾರ್ ಕಾಸರಗೋಡು, ಸಾಹಿತಿ ಶ್ರೀಮತಿ ಮಾಲತಿ ಶೆಟ್ಟಿ ಮಣೂರು ಹಾಗೂ ಕವಯತ್ರಿ ಶ್ರೀಮತಿ ಸಪ್ನಾ ದಿನಕರ್‌ರವರ ಕುಟುಂಬದವರು ಹಾಗೂ ಅಭಿಮಾನಿಗಳು ಭಾಗವಹಿಸಿದ್ದರು. ಸಪ್ನಲೋಕ ಇವರ ಎರಡನೇ ಕವನ ಸಂಕಲನ.

## ಸಂಗೀತ ಕಾರ್ಯಕ್ರಮ




ಕಾಸರಗೋಡು ಶ್ರೀ ಪುರಂದರದಾಸ ಸಂಗೀತ ಕಲಾಮಂದಿರದ ಆಶ್ರಯದಲ್ಲಿ ಜರಗಿದ ಸಂಗೀತ ಆರಾಧನೆಯ ಸಂದರ್ಭದಲ್ಲಿ ಶ್ರೀಮತಿ ರಾಧಾ ಮುರಳೀಧರ್ ಮತ್ತು ಬಳಗದವರು ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು.

## 45ನೇ ವರ್ಷದ ವಿವಾಹ ದಿನಾಚರಣೆಯ ಶುಭಾಶಯಗಳು



**ಶ್ರೀ ಹರಿನಾರಾಯಣ ಭಂಡಿ ಹಾಗೂ ಶ್ರೀಮತಿ ಕುಸುಮಾ ಭಂಡಿ**

-: ಶುಭ ಕೋರುವ :-

ಶ್ರೀಮತಿ ಪ್ರವೀಣ ಹಾಗೂ ಶ್ರೀ ವಿಶ್ವಕುಮಾರ (ಮಗಳು-ಅಳಿಯ)
ಶ್ರೀ ಪ್ರಭಾಕರ ಭಂಡಿ ಹಾಗೂ ಶ್ರೀಮತಿ ಪ್ರತಿಭಾ (ಮಗ-ಸೊಸೆ)
ಶ್ರೀಮತಿ ಅನ್ನಪೂರ್ಣೇಶ್ವರಿ ಹಾಗೂ ಶ್ರೀನಾಥ ಶ್ಯಾನುಭಾಗ್ (ಮಗಳು-ಅಳಿಯ)
ಶ್ರೀಮತಿ ಅನುಪಮಾ ಹಾಗೂ ಶ್ರೀ ನಾಗೇಶ ಭಟ್ (ಮಗಳು-ಅಳಿಯ)
ಅಭ್ಯುದಯ, ಅನುಪ್, ಅನನ್ಯ, ಶ್ರೇಯ, ಅನರ್ಘ್ಯ (ಮೊಮ್ಮಕ್ಕಳು)


**With Best Compliments From :**

***Rajathadri Hotel Pvt. Ltd.**
Lodging & Boarding

Sri Ramesh Shanubhag, Usha, Sanketh and Kavitha
Directors




OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com



*With Best Compliments from :*

**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**

Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)


# ಶ್ರೀ ಶಾರದಾ ಮಂಟಪದಲ್ಲಿ ಶಂಕರ ಜಯಂತಿ



ವೈಶಾಖ ಶುದ್ಧ ಪಂಚಮಿಯ ದಿನ ತಾ.28.04.2020ರಂದು ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಂಕರ ಜಯಂತಿಯನ್ನು ಲಾಕ್‌ಡೌನ್ ನಿಮಿತ್ತ ಸರಳವಾಗಿ ಆಚರಿಸಲಾಯಿತು. ಶ್ರೀ ಶಂಕರಾಚಾರ್ಯರ ಮೂರ್ತಿಗೆ ಅಭಿಷೇಕ, ಪುಷ್ಪಾಲಂಕಾರ ಸಲ್ಲಿಸಿ ಬ್ರಹ್ಮಶ್ರೀ ಜಗದೀಶ ಉಪಾಧ್ಯಾಯರ ಅಧ್ವರ್ಯುತನದಲ್ಲಿ ಮಹಾಪೂಜೆಯನ್ನು ನೆರವೇರಿಸಲಾಯಿತು.


**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
**“ಗೃಹ ಸಾಲ”**
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 12.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



ಡಾ। ಸಂಜಾತ ಎ. ಎಸ್.
B.D.S., MBA (HCS)
ಡೆಂಟಲ್ ಸರ್ಜನ್

**ಬೆಳ್ಳೆ ಡೆಂಟಲ್ ಕೇರ್**
(ಎಕ್ಸ್‌ರೇ ವ್ಯವಸ್ಥೆಯೊಂದಿಗೆ)
ಫರ್ನ್ಸ್ ಕಾಂಪ್ಲೆಕ್ಸ್,
ಬೆಳ್ಳೆ ಪಂಚಾಯತ್ ಎದುರು, ಮೂಡುಬೆಳ್ಳೆ
ಮೊಬೈಲ್. : 9449419097, 9448523635



ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551


**ಹರಿಕೃಷ್ಣ ಡಿಜಿಟಲ್ಸ್**

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

“ಶ್ರೀರಂಗ”, ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

**ವೃಂದಾವನ್ ನೆಸ್ಟ್**
ಶುದ್ಧ ಸಸ್ಯಾಹಾರಿ
ಎನ್.ಎಚ್. 66. ಕಟಪಾಡಿ, ಉಡುಪಿ
ನೂತನ ಸುಸಜ್ಜಿತ ವಿಶಾಲ ಉಪಾಹಾರ ಗೃಹ
ಮೊಬೈಲ್.7899990960



ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ


| | | | |
|---|---|---|---|
| ಹೋಟೇಲ್ ವೃಂದಾವನ<br>ಕದ್ರಿ, ಮಂಗಳೂರು | ವಿನೀತ್ ಮೆಡಿಕಲ್ಸ್<br>ಪಡುಬಿದ್ರಿ | ವಿಶ್ವ ಟ್ರಾನ್ಸ್‌ಪೋರ್ಟ್<br>ಮಂಗಳೂರು | ಶ್ರೀಮತಿ ಮಧುರಾ ವ್ಯಾಸರಾಜ್ ರಾವ್<br>ಶ್ರೀ ಧವಳ ಎಲ್ಲೂರು |

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ




**With Best Compliments From :**

Land Trades™
BUILDERS & DEVELOPERS


UPGRADE TO A NEW LIFESTYLE
Premium Projects in Mangalore










9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+ CREDAI


Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org